## ಅಧ್ಯಾಯ 16

# ಹಾಗಾರಳು ಮತ್ತು ಇಸ್ಮಾಯೇಲನ ಕಥೆ

ಆದಿಕಾಂಡ 11:30ರಷ್ಟು ಆರಂಭದಲ್ಲಿಯೇ, ಸಾರಳು ಬಂಜೆಯಾಗಿದ್ದಳು ಎಂಬುದನ್ನು ಲೇಖಕನು ಪ್ರಕಟಗೊಳಿಸಿದ್ದನು; ಆದಾಗ್ಯೂ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ಮೂಲಭೂತ ಆಶೀರ್ವಾದಗಳಲ್ಲಿ ಒಂದು ಎಂದರೆ ಆತನ ವಂಶವು ಮುಂದೆ "ಒಂದು ದೊಡ್ಡ ಜನಾಂಗ" ಆಗುವುದು ಎಂಬುದೆ (12:2). ಸತತವಾಗಿ, ಮೂಲಪಿತೃವಿಗೆ ಅನೇಕ ಸಂತತಿಯವರು ಉಂಟಾಗುವರು ಮತ್ತು ಅವರು ಕಾನಾನ್ ದೇಶವನ್ನು ಒಂದು ಬಹುಮಾನವಾಗಿ ಪಡೆದುಕೊಳ್ಳುವರು ಎಂಬುದಾಗಿ ಯೆಹೋವನು ಹೇಳಿದ್ದನು (12:7; 13:15, 16; 15:4-7).

ದೇವರು ಒಬ್ಬ ದತ್ತು ಪಡೆದುಕೊಂಡಿರುವ ಬಾಧ್ಯಸ್ಥನನ್ನು ವಾಗ್ದಾನ ಮಾಡಲ್ಪಟ್ಟ ಸಂತಾನ ಆಗಲಾರನು ಎಂದು ಹೇಳಿದನು (15:2-4). ಆತನು ಅಬ್ರಹಾಮನ ಸಂಗಡ ಒಂದು ಶಾಸ್ತ್ರೋಕ್ತವಾದ ಒಡಂಬಡಿಕೆಯನ್ನು ಮಾಡಿದನು, ವಾಗ್ದಾನ ದೇಶದ ಬಾಧ್ಯಸ್ಥನು ಮೂಲಪಿತೃವಿನ "ಹೊಟ್ಟೆಯಲ್ಲಿಯೇ" ಹುಟ್ಟುವನು ಎಂಬುದನ್ನು ದೃಢಪಡಿಸಿದನು (15:4, 5, 13-18). ದೇವರು ತನ್ನ ವಾಗ್ದಾನವನ್ನು ಕಾಪಾಡಿಕೊಳ್ಳುವಂತಾಗುವ ಹಾಗೆ ಸಾರಳು ಆತನಿಗೆ ಸಹಾಯ ಮಾಡುವದಕ್ಕೆ ಪ್ರಯತ್ನಿಸಿದಳು, ಆದರೆ ಆಕೆಯ ಯೋಜನೆಯಿಂದ ಕಹಿಯಾದ ಫಲಿತಗಳಾಗಿದ್ದವು.

## ಅಬ್ರಹಾಮನ ಕುಟುಂಬದಲ್ಲಿ ಕಲಹ (16:1-6)

**1ಅಬ್ರಾಮನ ಹೆಂಡತಿಯಾದ ಸಾರಯಳಿಗೆ ಮಕ್ಕಳಿರಲಿಲ್ಲ. ಆಕೆಗೆ ಐಗುಪ್ತ ದೇಶದವಳಾದ ಹಾಗರಳೆಂಬ ದಾಸಿಯಿದ್ದಳು. 2ಹೀಗಿರಲಾಗಿ ಸಾರಯಳು ಅಬ್ರಾಮನಿಗೆ - ಯೆಹೋವನು ನನಗೆ ಮಕ್ಕಳನ್ನು ಕೊಡಲಿಲ್ಲವಷ್ಟೆ; ನೀನು ನನ್ನ ದಾಸಿಯ ಬಳಿಗೆ ಹೋಗಬೇಕು; ಒಂದು ವೇಳೆ ಅವಳ ಮೂಲಕ ನನಗೆ ಸಂತಾನವಾದೀತು ಎಂದು ಹೇಳಲು ಅಬ್ರಾಮನು ಆಕೆಯ ಮಾತಿಗೆ ಸಮ್ಮತಿಪಟ್ಟನು. 3ಅಬ್ರಾಮನು ಹತ್ತು ವರುಷ ಕಾನಾನ್ ದೇಶದಲ್ಲಿ ವಾಸಿಸಿದ ಮೇಲೆ ಅವನ ಹೆಂಡತಿಯಾದ ಸಾರಯಳು ಐಗುಪ್ತ್ಯಳಾದ ಹಾಗರಳೆಂಬ ದಾಸಿಯನ್ನು ಕರೆದು ತನ್ನ ಗಂಡನಿಗೆ ಹೆಂಡತಿಯಾಗಿ ಒಪ್ಪಿಸಿದಳು. 4ಅವನು ಹಾಗರಳನ್ನು ಕೂಡಲು ಬಸುರಾದಳು. ತಾನು ಬಸುರಾದೆನೆಂದು ತಿಳುಕೊಂಡಾಗ ಅವಳು ಯಾಜಮಾನಿಯನ್ನು ತಾತ್ಸಾರ ಮಾಡಿದಳು. 5ಆಗ ಸಾರಯಳು ಅಬ್ರಾಮನಿಗೆ - ನನ್ನ ಗೋಳು ನಿನಗೆ ತಗಲಲಿ; ನನ್ನ ದಾಸಿಯನ್ನು ನಿನಗೆ ಹೆಂಡತಿಯಾಗಿ ಒಪ್ಪಿಸಿದೆನಷ್ಟೆ; ಅವಳು ತಾನು ಬಸುರಾದೆನೆಂದು ತಿಳಿದು ನನ್ನನ್ನು**

ತಾತ್ಸಾರಮಾಡುತ್ತಾಳೆ; ನಿನಗೂ ನನಗೂ ಯೆಹೋವನೇ ನ್ಯಾಯತೀರಿಸಲಿ ಎಂದು ಹೇಳಲು ಅಬ್ರಾಮನು - [6]ನಿನ್ನ ದಾಸಿಯು ನಿನ್ನ ಕೈಯಲ್ಲೇ ಇದ್ದಾಳೆ; ಮನಸ್ಸುಬಂದಂತೆ ಮಾಡು ಅಂದನು. ಆಗ ಸಾರಯಳು ಅವಳನ್ನು ಬಾಧಿಸಲು ಅವಳು ಓಡಿಹೋದಳು.**

**ವಚನ 1.** ಅಬ್ರಹಾಮನು ತನಗೆ ಮಾಡಲ್ಪಟ್ಟಿದ್ದ ದೈವಿಕ ವಾಗ್ದಾನದ ಕುರಿತು ತನ್ನ ಹೆಂಡತಿಯೊಂದಿಗೆ ಹಂಚಿಕೊಂಡಿದ್ದನೆಂಬುದು ಸ್ಪಷ್ಟವಾಗಿದೆ; ಆದಾಗ್ಯೂ, ಕಾಲವು ಗತಿಸಿದ ಹಾಗೆ, ಆತನ ಹೆಂಡತಿಯಾದ ಆಕೆಗೆ **ಮಕ್ಕಳಿರಲಿಲ್ಲ**. ಆಕೆಗೆ ಎಂದಾದರೂ ಮಕ್ಕಳಾಗುವ ಸಾಧ್ಯತೆಯು ಅತ್ಯಂಥ ಅಸಂಭವನೀಯವೆಂದು ಕಾಣಿಸುತ್ತಿತ್ತು, ಯಾಕೆಂದರೆ ಆಕೆಗೆ ಈಗಾಗಲೇ ಕನಿಷ್ಠ ಎಪ್ಪತ್ತೈದು ವರ್ಷ ವಯಸ್ಸಾಗಿತ್ತು.[1] ಅಷ್ಟೊಂದು ವಯಸ್ಸಾಗಿರುವ ಹಂತದಲ್ಲಿ, ಮುಟ್ಟು ನಿಲ್ಲುವ ಕಾಲ ಬಹುಶಃ ಈಗಾಗಲೇ ಆರಂಭವಾಗಿದ್ದಿರಬಹುದು, ಆದ್ದರಿಂದ ಗರ್ಭಧರಿಸುವದಕ್ಕಿದ್ದ ಸಕಲ ಸ್ವಾಭಾವಿಕ ನಿರೀಕ್ಷೆಯು ಹೊರಟು ಹೋಗಿತ್ತು.

ಬೈಬಲಿನ ಲೇಖಕನು **ಸಾರಯ**ಳನ್ನು ಅಬ್ರಹಾಮನ **ಹೆಂಡತಿ** (אִשָּׁה, *ಇಶಶಾಹ)* ಎಂದು ಬಣ್ಣಿಸುತ್ತಾನೆ, ಇದು ಹಳೆಯ ಒಡಂಬಡಿಕೆಯಲ್ಲಿ "ಸ್ತ್ರೀ" ಅಥವಾ "ಹೆಂಡತಿ" ಎಂಬುದಕ್ಕೆ ಬಳಸುವ ಅತ್ಯಂತ ಸರ್ವಸಾಧಾರಣವಾದ ಪದವಾಗಿರುತ್ತದೆ. ಯೆಹೋವನು ಹವ್ವಳನ್ನು ಆದಾಮನ ಬಳಿಗೆ ಕರೆದುಕೊಂಡು ಬಂದು ಪರಿಚಯ ಮಾಡಿದ ವೇಳೆ (2:23), ಒಬ್ಬ "ಹೆಂಡತಿ" ಎಂಬ ಅರ್ಥದಲ್ಲಿ ಈ ಪದವನ್ನು ಮೊದಲ ಬಾರಿಗೆ ಆದಾಮನು ಬಳಸಿದ್ದನು. ಅದಕ್ಕೆ ತದ್ವಿರುದ್ಧವಾಗಿ, **ಐಗುಪ್ತ ದೇಶದವಳಾದ ಹಾಗ**ರಳನ್ನು ಸಾರಳ **ದಾಸಿ** (שִׁפְחָה, *ಶಿಪ್-ಚಾಹಾ*) ಎಂದು ಕರೆಯಲಾಗಿದೆ. ಹಳೆಯ ಒಡಂಬಡಿಕೆಯಲ್ಲಿ, ಈ ಪದವು ಸಾಮಾನ್ಯವಾಗಿ ಮದುವೆಯಾಗಿರುವ ಮಹಿಳೆಯ "ಭಾವಿ-ದಾಸಿಯರ"[2] ನಡುವೆ ಒಬ್ಬಳಾಗಿರುತ್ತಿದ್ದ ಒಬ್ಬ ಸ್ತ್ರೀ ದಾಸಿ ಎಂಬ ಅರ್ಥವನ್ನು ಸೂಚಿಸುತ್ತದೆ. ಆಕೆಯು ಅಬ್ರಹಾಮನಿಗೆ ಫರೋಹನು ಬಹುಮಾನವಾಗಿ ಕೊಟ್ಟಿದ್ದ "ಸ್ತ್ರೀ ಸೇವಕರಲ್ಲಿ" ಒಬ್ಬಳಾಗಿದ್ದಿರಬಹುದು (12:16), ಮತ್ತು ಈಗ ಆಕೆಯು ಸಾರಳ ವೈಯಕ್ತಿಕ ದಾಸಿಯಾಗಿ ಆಕೆಯ ಅಧಿಕಾರದಡಿಯಲ್ಲಿದ್ದಳು.

**ವಚನ 2.** ಆಕೆಯ ಮೇಲೆ ಒತ್ತಡವು ಅಧಿಕವಾಗುತ್ತಾ ಹೋದಂತೆ, ಸಂತಾನವನ್ನು ಹಡೆಯಲು ತನಗೆ ಆಗದಿರುವದಕ್ಕೆ **ಯೆಹೋವನು** ಕಾರಣನೆಂದು ಆರೋಪಿಸಿದಳು, **ಮಕ್ಕಳನ್ನು ಕೊಡಲಿಲ್ಲವಷ್ಟೆ** ವಾದಿಸಿದಳು. ಈ ರೀತಿಯ ಅಭಿಪ್ರಾಯಕ್ಕೆ ಬಂದಿದ್ದರಲ್ಲಿ ಆಕೆಯು ಸರಿಯಿರಬಹುದು ಅಥವಾ ತಪ್ಪಿರಬಹುದು, ಅದನ್ನು ತಿಳಿಯುವದಕ್ಕೆ ಸಾಧ್ಯವೇ ಇಲ್ಲ. ಖಂಡಿತವಾಗಿಯೂ, ಸ್ತ್ರೀಯರನ್ನು ಗರ್ಭಧರಿಸದಂತೆ ತಡೆಯುವ ಕೆಲವೊಂದು ಶಾರೀರಿಕವಾದ ಮತ್ತು/ಅಥವಾ ಮನೋವೈಜ್ಞಾನಿಕ ಕಾರಣಗಳಿರುತ್ತವೆಂಬುದು ಈ ದಿನಗಳಲ್ಲಿ ನಮಗೆ ಗೊತ್ತಾಗಿರುತ್ತದೆ. ಹೇಗೂ, ಆದಿಕಾಂಡದೊಳಗೆ ದೇವರು ಸ್ತ್ರೀಯ ಗರ್ಭವನ್ನು ಮಕ್ಕಳಾಗದಂತೆ ತಡೆದಂಥ ಅಸ್ವಾಭಾವಿಕವಾದ ಪರಿಸ್ಥಿತಿಗಳು ಸಂಭವಿಸಿದ್ದಂತೂ ನಿಜವಾಗಿರುತ್ತದೆ; ಅಂಥ ಪರಿಸ್ಥಿತಿಗಳಲ್ಲಿ ಮುಂದೆ ದೈವಿಕ ಹಸ್ತಕ್ಷೇಪವಾಗುವ ತನಕ ಗರ್ಭಧಾರಣೆಯು ಅಸಾಧ್ಯವಾಗಿ ಮಾರ್ಪಟ್ಟಿತ್ತು (20:17, 18; ನೋಡಿರಿ 29:31; 30:22). ಅವರ ಪರಿಸ್ಥಿತಿಗಳ ವಿವರಗಳು ಏನೇ ಆಗಿದ್ದಿರಬಹುದು, ಸಾರಳ ಬಂಜೆತನವು ಆದುಕೊಳ್ಳಲ್ಪಟ್ಟ ದಂಪತಿಗೆ ಒಂದು ನಂಬಿಕೆಯ ಪರೀಕ್ಷೆಯಾಗಿತ್ತು.

ಸಾರಳು ಆಕೆಯ ಜೀವಿತದ ಈ ಹಂತದಲ್ಲಿ, ತನ್ನ ಸ್ವಂತ ಮಗುವನ್ನು ಪಡೆಯುವದು ಸಾಧ್ಯತೆಯಿಲ್ಲವೆಂದು ನಿರಾಶೆಗೊಂಡಿದ್ದಳೆಂದು ಕಾಣುತ್ತದೆ, ಆದ್ದರಿಂದ ಆಕೆಯು ಅಬ್ರಹಾಮನನ್ನು ಆಕೆಯ **ದಾಸಿಯ ಬಳಿಗೆ ಹೋಗಬೇಕು** ಎಂದು ಬೇಡಿಕೊಳ್ಳುತ್ತಾ ಹೀಗೆ ಹೇಳಿದಳು, **ಒಂದು ವೇಳೆ ಅವಳ ಮೂಲಕ ನನಗೆ ಸಂತಾನವಾದೀತು**. ಇಂದು ಇದು ನಮಗೆ

ಅತ್ಯಂಥ ವಿಚಿತ್ರವೆಂದು ಅನ್ನಿಸುತ್ತದೆ; ಆದರೆ, ಕುಟುಂಬದ ವಂಶವನ್ನು ಶಾಶ್ವತವಾಗಿ ಉಳಿಯುವಂತೆ ಮಾಡುವದಕ್ಕೆ ಒಬ್ಬ ಗಂಡು ಮಗುವಿನ ಪ್ರಾಮುಖ್ಯತೆ ಮತ್ತು ಪ್ರಾಚೀನ ಸಮಯಗಳಲ್ಲಿ ಬಂಜೆಯಾಗಿರುವ ಹೆಂಡತಿಗೆ ಮಾಡುತ್ತಿದ್ದ ಅವಮಾನವನ್ನು ನೋಡುವಾಗ, ತನಗೆ ಬೇರೆ ಇನ್ನಾವ ದಾರಿಯೂ ಇರುವದಿಲ್ಲ ಎಂಬುದಾಗಿ ಸಾರಳು ನಂಬಿರುವ ಸಾಧ್ಯತೆಯಿದೆ.

ಸಾರಳಿಗೆ ಇದ್ದ ಗರ್ಭಧರಿಸುವ ನಿರೀಕ್ಷೆಯು ಹೊರಟು ಹೋಗಿತ್ತು, ಮತ್ತು ಆಕೆಯು ತಾಳ್ಮೆಯು ಇಲ್ಲವಾಗಿತ್ತು. ಅಬ್ರಹಾಮನಿಗೆ ಮಕ್ಕಳಿಲ್ಲವಾದಲ್ಲಿ, ದೇವರು ವಾಗ್ದಾನ ಮಾಡಿದ್ದ ವಾಗ್ದಾನ ದೇಶವನ್ನು ಒಂದು ದಿನ ಬಾಧ್ಯವಾಗಿ ಹೊಂದುವ ಅಸಂಖ್ಯಾತ ಸಂತತಿಯವರಿಗೆ ಅಬ್ರಹಾಮನು ಹೇಗೆ ತಂದೆಯಾಗುವದಕ್ಕೆ ಸಾಧ್ಯ? ಪ್ರಾಚೀನ ಮಧ್ಯಪ್ರಾಚ್ಯದಲ್ಲಿ, ಬಹಪತ್ನಿತ್ವಕ್ಕೆ ಕೊಡಲಾಗುತ್ತಿದ್ದ ಕಾರಣವೆಂದರೆ ಹೆಂಡತಿಯ ಬಂಜೆತನವಾಗಿರುತ್ತಿತ್ತು ಅಥವಾ ಆಕೆಗೆ ಗಂಡು ಮಗುವನ್ನು ಹಡೆಯುವದಕ್ಕೆ ಸಾಧ್ಯವಾಗುವದಿರುವಿಕೆ ಕಾರಣವಾಗಿರುತ್ತಿತ್ತು. ಅಂಥ ಪ್ರಕರಣಗಳಲ್ಲಿ, ಗಂಡನು ಎರಡನೆಯ ಹೆಂಡತಿಯೊಬ್ಬಳನ್ನು ಮಾಡಿಕೊಳ್ಳಲು ಸ್ವತಂತ್ರನಾಗಿರುತ್ತಿದ್ದನು; ಆದರೆ ಬಹಳ ಸರ್ವಸಾಧಾರಣವಾಗಿದ್ದ ರೂಢಿಯೆಂದರೆ ಗಂಡನು ಹಾಗರಳಂತಹ ಒಬ್ಬ ದಾಸಿ ಅಥವಾ ಸೇವಕ ಹುಡುಗಿಯ ಮೂಲಕವಾಗಿ ಗಂಡು ಮಗುವನ್ನು ಪಡೆಯುವುದು ಆಗಿತ್ತು.

ಪ್ರಾಚೀನ ಮೆಸಪೋತಾಮ್ಯದಲ್ಲಿನ - ಸುಮಾರು ಹತ್ತು ವರ್ಷಗಳ ಮುಂಚೆ ಕಾನಾನಿಗೆ ಬಂದು ಸೇರುವ ತನಕ ಅಬ್ರಹಾಮ ಮತ್ತು ಸಾರಳರು ಅಲ್ಲಿಯೇ ಹುಟ್ಟಿ ಬೆಳೆದವರಾಗಿದ್ದರು - ಕಾನೂನಿನ ವಿಧಿಗಳಲ್ಲಿ ಅದಕ್ಕೆ ಅವಕಾಶಗಳಿದ್ದವು. ಉದಾಹರಣೆಗೆ, ನುಝಿ ಎಂಬಲ್ಲಿ ಸಿಕ್ಕ ಒಂದು ಬರಹ, ಕ್ರಿ.ಪೂ. ಐದನೆಯ ಶತಮಾನಕ್ಕೆ ಸೇರಿದ್ದಾಗಿದ್ದು, ಅದು ಹೇಳುವದೇನೆಂದರೆ ಒಂದು ಗಣ್ಯ ಕುಟುಂಬಕ್ಕೆ ಸೇರಿದ ಸ್ತ್ರೀಯು ಮಕ್ಕಳನ್ನು ಹಡೆಯಲು ಅಶಕ್ತಳಾದಲ್ಲಿ ಆಕೆಯ ಸ್ಥಾನದಲ್ಲಿದ್ದುಕೊಂಡು ಗಂಡನಿಂದ ಮಕ್ಕಳನ್ನು ಹೆರುವಂತೆ ತನ್ನ ಗಂಡನಿಗೋಸ್ಕರ ಲುಲ್ಲು (ಅಲ್ಲಿ ಅತ್ಯುತ್ತಮವಾದ ದಾಸಿಯವರು ಸಿಕ್ಕುತ್ತಿದ್ದರು) ಎಂಬ ಸ್ಥಳದಿಂದ ಒಬ್ಬ ಉಪಪತ್ನಿಯ ಏರ್ಪಾಡುವ ಮಾಡುವ ಆಯ್ಕೆಯು ಆಕೆಗಿರುತ್ತಿತ್ತು. ಆ ಐಕ್ಯತೆಯೊಳಗಿಂದ ಹುಟ್ಟಿದ ಮಗುವಿನ ಮೇಲೆ ಆಕೆಗೆ ದಾಂಪತ್ಯದಿಂದ ಜನಿಸಿದ ಕಾನೂನುಬದ್ಧ ಸಂತಾನವೆಂಬ ಹಕ್ಕು ಇರುತ್ತಿತ್ತು.[3]

ಸಾರಳು ಬಹುಶಃ ದಿಕ್ಕು ತೋಚದಂಥ ಸ್ಥಿತಿಯನ್ನು ಅನುಭವಿಸಿರಬಹುದು. ಆಕೆಯು ಖಂಡಿತವಾಗಿಯೂ ಕಾನೂನುಬದ್ಧವಾಗಿ ತನಗೆ ಸರಿಸಮಾನಳಾಗುವ ವಿರೋಧಿ ಹೆಂಡತಿಯೊಬ್ಬಳು ಇರುವುದು ಇಷ್ಟವಿರಲಿಲ್ಲ. ಆದದರಿಂದ, ಸಾರಳ ಮನಸ್ಸಿನಲ್ಲಿ, ಅತ್ಯಂತ ಕಡಿಮೆ ಆಕ್ಷೇಪಕರವಾದ ಆಯ್ಕೆಯೆಂದರೆ ವಾಗ್ದಾನ ಮಗುವಿಗೆ ದಾಸಿಯಾದ ಹಾಗರಳನ್ನು ಬದಲಿ ತಾಯಿಯನ್ನಾಗಿ ಮಾಡುವಂತೆ ಅಬ್ರಹಾಮನನ್ನು ಬೇಡಿಕೊಳ್ಳುವುದೇ ಆಗಿತ್ತು.

ಇಲ್ಲಿ ಬಳಸಲಾಗಿರುವ ಭಾಷೆಯು ಗಮನಿಸತಕ್ಕದ್ದಾಗಿದೆ, ಯಾಕೆಂದರೆ ಮೂಲಪಿತೃವು ತಪ್ಪು ದಾರಿಯಲ್ಲಿ ಹೆಂಡತಿಯ ಸಲಹೆಗೆ ಪ್ರತಿಕ್ರಿಯಿಸಿದ್ದು ಏದೆನ್ ತೋಟದಲ್ಲಿ ಆದಾಮನು ಹವ್ವಳಿಗೆ ನೀಡಿದ ಪ್ರತಿಕ್ರಿಯೆಯನ್ನು ತಿಳಿಸುವ ಅದೇ ಪದಗಳಲ್ಲಿಯೇ ಬರೆಯಲ್ಪಟ್ಟಿರುತ್ತದೆ (3:17).[4] ಕಥನವು ಹೇಳುವದೇನೆಂದರೆ **ಅಬ್ರಾಮನು ಆಕೆಯ ಮಾತಿಗೆ ಸಮ್ಮತಿಪಟ್ಟನು**, ಆತನು ಆಕೆಯ ಸಲಹೆಯಂತೆ ನಡೆದುಕೊಂಡನು ಎಂದು ಹೇಳುವ ಇಬ್ರಿಯ ಭಾಷೆಯ ರೀತಿಯಾಗಿರುತ್ತದೆ. ಒಂದು ಅರ್ಥದಲ್ಲಿ, ಅಬ್ರಹಾಮನು "ಮನುಷ್ಯನ ಬೀಳುವಿಕೆ" ಯನ್ನು ಪುನರಾಭಿನಯ ಮಾಡಿದನು ಎಂಬಂತಾಗಿತ್ತು. ದೇವರಲ್ಲಿ ಭರವಸವಿಡುವದರ ಬದಲಾಗಿ ಮತ್ತು ಆತನ ವಾಕ್ಯವನ್ನು ಅನುಸರಿಸುವದರ ಬದಲಾಗಿ, ಆತನು ತನ್ನ ಹೆಂಡತಿಯ ಮಾತನ್ನು

ಆಲಿಸಿದನು ಮತ್ತು ಆಕೆಯ ಅಪ್ಪಣೆಯಂತೆ ವಿಧೇಯನಾದನು, ಹೀಗೆ ಹೃದಯ ಒಡೆಯುವಂಥ ಫಲಿತಗಳನ್ನು ಅನುಭವಿಸಿದನು.

**ವಚನ 3.** ವಾಗ್ದಾನ ದೇಶದಲ್ಲಿ ಒಂದು ದಶಕವನ್ನು ಕಳೆದ ಬಳಿಕ ಮತ್ತು ಇನ್ನೂ ಒಬ್ಬ ಮಗನನ್ನು ಪಡೆಯುವ ಯಾವ ನಿರೀಕ್ಷೆಯನ್ನೂ ಕಾಣದೆ, ಸಾರಳು **ಐಗುಪ್ತ್ಯಳಾದ ಹಾಗರಳೆಂಬ ದಾಸಿಯನ್ನು ಕರೆದು ತನ್ನ ಗಂಡನಿಗೆ ಹೆಂಡತಿಯಾಗಿ ಒಪ್ಪಿಸಲು** ದೃಢನಿರ್ಧಾರ ಮಾಡಿಕೊಂಡಳು. ದಾಸಿಯಾದ *(ಶಿಪಚಾಹ)* ಹಾಗರಳು ಅಬ್ರಹಾಮನ ಹೆಂಡತಿ *(ಇಶಶಾಹ)* ಆದಳಾದರೂ, ಆಕೆಯ ಎರಡನೆಯ ಹೆಂಡತಿಯಾಗಿದ್ದಳು; ಆಕೆಗೆ ಕೆಲವು ಕಾನೂನಿನ ಹಕ್ಕುಗಳಿದ್ದವಾದರೂ, ಆಕೆಗೆ ಸಾರಳಿಗೆ ಸಮಾನವಾದ ಸ್ಥಾನವಿರಲಿಲ್ಲ. ಆಕೆಯು ತನ್ನ ಗಂಡನಿಗೆ ಸಾರಳು ನೀಡಿದ ಬಹುಮಾನ ಆಗಿದ್ದಳು, ಮತ್ತು ಅಬ್ರಹಾಮನು ಬಹುಮಾನವನ್ನು ಪಡೆದುಕೊಂಡವನಾಗಿದ್ದನು; ಒಬ್ಬ ಉಪಪತ್ನಿಯಾಗುವಿಕೆಯಲ್ಲಿ ಹಾಗರಳಿಗೆ ಯಾವ ಆಯ್ಕೆಯೂ ಇರಲಿಲ್ಲ.

ಹಳೆಯ ಒಡಂಬಡಿಕೆಯ ಮಿಕ್ಕ ಭಾಗದಲ್ಲಿ, "ಉಪಪತ್ನಿ" (פִּלֶגֶשׁ, *ಪಿಲೆಗೆಶ್)* ಮತ್ತು "ಹೆಂಡತಿ" (אִשָּׁה, *ಇಶಶಾಹ)* ಎಂಬ ಪದಗಳು ಯಾವಾಗಲೂ ಒಂದರಿಂದ ಪ್ರತ್ಯೇಕವಾಗಿ ಗುರುತಿಸಲ್ಪಟ್ಟಿರುತ್ತವೆ. ಹೇಗೂ, ಆದಿಕಾಂಡದ ಲೇಖಕನು ಒಬ್ಬ ಸ್ತ್ರೀಯನ್ನೇ ಸೂಚಿಸುವದಕ್ಕೆ ಎರಡೂ ಪದಗಳನ್ನು ಬಳಸಿದನು: ಹಾಗರಳು (16:3; 25:6), ಕೆಟೂರಳು (25:1, 6), ಮತ್ತು ಬಿಲ್ಹಳು (30:4; 35:22). ಈ ಮಾಹಿತಯನ್ನಾಧರಿಸಿ, Victor P. Hamiltonನು ಊಹಿಸಿಕೊಂಡಿದ್ದೇನೆಂದರೆ, ಮೂಲಪಿತೃಗಳ ಕಾಲದಲ್ಲಿ, ಈ ಪದಗಳು ಪರ್ಯಾಯ ಪದಗಳಾಗಿ ಬಳಸಲ್ಪಟ್ಟವು ಮತ್ತು ಈಗ ನಮ್ಮ ಮುಂದಿರುವಂಥ ಉಪಪತ್ನಿಯ ವಿಧವನ್ನು ಸೂಚಿಸುವದಕ್ಕೆ ಯಾವದೇ ಏಕ ಪದವು ಲಭ್ಯವಿರಲಿಲ್ಲ.[5]

**ವಚನ 4.** ಸಾರಳ ಮನವಿಯಂತೆ ನಡೆದುಕೊಳ್ಳುವವನಾಗಿ, ಅಬ್ರಹಾಮನು **ಹಾಗರಳನ್ನು ಕೂಡಲು** - ಅಂದರೆ, ಆತನು ಆಕೆಯೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಂಡನು. ವಾಕ್ಯವು ಬೇರೆ ಸಂದರ್ಭವನ್ನು ಸೂಚಿಸುವದಿಲ್ಲವಾದ್ದರಿಂದ, ಈ ನಿಕಟ ಸಂಬಂಧವು ಒಂದೇ ಒಂದು ಸಮಯಕ್ಕೆ ಮಾತ್ರವೇ ಸೀಮಿತವಾಗಿರಬಹುದಾಗಿದೆ. ಅಬ್ರಹಾಮ ಮತ್ತು ದಾಸಿ ಇಬ್ಬರು ಸಾರಳ ಸಾಧನಗಳಾಗಿ ಕೆಲಸ ಮಾಡಿದರು; ಮತ್ತು ಹಾಗರಳು **ಬಸುರಾದಾಗ**, ಅವಳು ಮಾಡಿದ್ದ ಸಂಚು ಯಶಸ್ವಿಯಾಗುವದೆಂಬಂತೆ ಕಂಡಿತ್ತು. ಹೇಗೂ, ಆ ಯಶಸ್ಸು ಸಾರಳಿಗೆ ಸಂತೋಷವನ್ನು ತರಲಿಲ್ಲ. ಈ ಕಿರಿಯ ಸ್ತ್ರೀಗೆ ತಾನು ಗರ್ಭಿಣಿಯಾಗಿದ್ದೇನೆಂದು ಗ್ರಹಿಕೆಯಾದಾಗ, **ಅವಳು ಯಾಜಮಾನಿಯನ್ನು ತಾತ್ಸಾರ** ["ಆಕೆಯನ್ನು ಉಪೇಕ್ಷೆ ಮಾಡಿದಳು"; NRSV] **ಮಾಡಿದಳು**. ಇದು ಸಾರಳಲ್ಲಿ ಅತ್ಯಂಥ ತೀಕ್ಷ್ಣವಾದ ಹೊಟ್ಟೆಕಿಚ್ಚನ್ನುಂಟು ಮಾಡಿತ್ತು, ಆಕೆಯು ಈಗ ಹಾಗರಳನ್ನು ತನ್ನ ಸ್ಥಾನಕ್ಕೆ ಒಂದು ಅಪಾಯ ಎಂಬಂತೆ ಕಂಡಳು. ಬಹುಪತ್ನಿತ್ವವು ಏಕೆ ದೇವರ ಚಿತ್ತವಾಗಿರುವದಿಲ್ಲ ಎಂಬುದಕ್ಕೆ ಇದು ನಿಶ್ಚಯವಾಗಿಯೂ ಒಂದು ಕಾರಣವಾಗಿರುತ್ತದೆ. ಯೆಹೋವನು ಆದಿಯಲ್ಲಿ ಆದಾಮನಿಗೋಸ್ಕರ ಒಬ್ಬಳೇ ಹೆಂಡತಿಯನ್ನು ನಿರ್ಮಿಸಿದ್ದನು (2:24). ಬಹುಪತ್ನಿತ್ವವಿರುವ ದಾಂಪತ್ಯದಲ್ಲಿ ಕ್ರಮೇಣವಾಗಿ ವೈಷಮ್ಯ, ಅಸೂಯೆ, ಮತ್ತು ಅಸ್ಥಿರತೆಗಳು ಬರುವವು (29:30, 31; 30:8; 35:22), ಮತ್ತು ಅಬ್ರಹಾಮನ ಮನೆಯಲ್ಲಿ ವಿನಾಶಕಾರಿ ಕಲಹವು ತೋರ್ಪಟ್ಟಿತು.

**ವಚನ 5.** ಹಾಗರಳ ಗರ್ವಿಷ್ಠ ಮನೋಭಾವಕ್ಕೆ ಪ್ರತಿಕ್ರಿಯೆಯಾಗಿ, ಸಾರಳು ಅಬ್ರಹಾಮನಿಗೆ ಹೀಗೆ ಹೇಳಿದಳು, **ನನ್ನ ಗೋಳು ನಿನಗೆ ತಗಲಲಿ**. ಆಕೆಯು ಮತ್ತೊಂದಾವರ್ತಿ ತಾನೇ ಮುಂದೆ ಬಂದು, ಅಬ್ರಹಾಮನ ಮೇಲೆ ದುಃಖಕರವಾದ ಆದರೆ ಆಕೆಯ ಮಾಡಿದ

ಸಂಚಿನಿಂದ ಮುಂದೆ ಹೀಗೆಯೇ ನಡೆಯಬಹುದಾಗಿದ್ದ ಗೊತ್ತಿದ್ದ ಸಂಗತಿಗೆ ದೋಷವನ್ನು ಹೊರಿಸಿದಳು.[6] ಕೋಪಗೊಂಡವಳಾಗಿದ್ದು, ಆಕೆಯ ತನ್ನ ಸಮಸ್ಯೆಗಳಿಗೆಲ್ಲಾ ಗಂಡನೇ ಕಾರಣನೆಂದು ಹೇಳಿದ್ದು ಮಾತ್ರವೇ ಅಲ್ಲ, ಆದರೆ ಹಾಗರಳ ದುರಹಂಕಾರದ ತಾತ್ಸಾರವನ್ನು "ನನ್ನ ಗೋಳು" ಎಂದು ಕರೆಯುತ್ತಾಳೆ. "ಗೋಳು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು חָמָס *(ಚಾಮಾಸ)*. ಪ್ರಳಯಕ್ಕೆ ಕಾರಣವಾಗಿದ್ದ ಪಾಪಗಳನ್ನು ಸೂಚಿಸುವ ವೇಳೆ, ಇದೇ ಪದವು 6:11, 13 ವಚನಗಳಲ್ಲಿ "ಹಿಂಸೆ" ಎಂದು ಅನುವಾದಿಸಲ್ಪಟ್ಟಿರುತ್ತದೆ. ಯಾಕೋಬನು ಸಹ ತನ್ನ ಪುತ್ರರು ಶೆಕೆಮಿನ ಜನರನ್ನು ಕೊಲೆ ಮಾಡಿದ್ದರ ಕುರಿತು 49:5ರಲ್ಲಿ ಮಾತಾಡುವ ವೇಳೆ ಇದೇ ಪದವನ್ನು ಬಳಸಿದನು (ನೋಡಿರಿ 34:25). ಹಾಗರಳು ತನ್ನ ಯಜಮಾನಿಯ ಮೇಲೆ ಶಾರೀರಿಕವಾಗಿ ಹಿಂಸೆಯನ್ನು ನಡಿಸಿದಳು ಎಂಬುದರ ಯಾವ ಸುಳಿವನ್ನೂ ವಾಕ್ಯವು ನೀಡುವದಿಲ್ಲವಾದರೂ, ಸಾರಳು ಆಕೆಯ ಮನೋಭಾವವನ್ನು ಹಿಂಸಾತ್ಮಕ ಮತ್ತು ದ್ವೇಷಕಾರಿ ಎಂಬಂತೆ ಅರ್ಥನಿರೂಪಣೆ ಮಾಡಿದಳು, ಮತ್ತು ಆಕೆಯು ಅವಳ ವಿರುದ್ಧವಾಗಿ ಒಂದು ಆರೋಪವನ್ನು ಮಾಡಿದಳು.

ಹಾಗರಳು ಸಾರಳ ಕಡೆಗೆ ಹೊಂದಿದ್ದ ತಾತ್ಸಾರವು ಸೂಚಿಸುವದೇನೆಂದರೆ ಆಕೆಯು ತನ್ನನ್ನು ತನ್ನ ಯಜಮಾನಿಗೆ ಸಮಾನಳೆಂದು ಭಾವಿಸಿಕೊಂಡಿದ್ದಳು, ಯಾಕೆಂದರೆ ಆಕೆಯು ತನ್ನ ಯಜಮಾನನಿಗೆ ಒಬ್ಬ ಬಾಧ್ಯಸ್ಥನನ್ನು ಹಡೆದು ಕೊಡಲಿದ್ದಳು, ಸಾರಳಿಗೆ ಅದು ಸಾಧ್ಯವಾಗಿರಲಿಲ್ಲವಷ್ಟೆ. ಹೀಗೆ ಇರುವದು ನಿಜವಾಗಿದ್ದಲ್ಲಿ, ಹಾಗರಳು ನಿಶ್ಚಯವಾಗಿಯೂ ಅತಿಯಾಗಿಯೇ ನಡೆದುಕೊಂಡಿದ್ದಳೆಂದು ಹೇಳಬಹುದು. ಪ್ರಾಚೀನ ಕಾನೂನಿನ ವಿಧಿಗಳು ಒಬ್ಬ ಉಪಪತ್ನಿಯಿಂದ ಮೊದಲ ಹೆಂಡತಿಗೆ ಈ ವಿಧವಾದ ಪ್ರತಿಕ್ರಿಯೆಯ ವಿರುದ್ಧವಾಗಿ ರಕ್ಷಣೆಯನ್ನು ಒದಗಿಸುತ್ತಿದ್ದವು. ಹಮ್ಮುರಾಬಿ ವಿಧಿಯು ಒಬ್ಬ ಪ್ರಮುಖ ಹೆಂಡತಿಯು ತನ್ನ ಗಂಡನಿಗೆ ಒಬ್ಬ ದಾಸಿಯನ್ನು ಒಪ್ಪಿಸಿ ಆಕೆಯ ಮೂಲಕ ಮಕ್ಕಳನ್ನು ಪಡೆಯುವಂತೆ ಹೇಳುವದನ್ನು ಸೂಚಿಸುತ್ತದೆ. ಅದು ಹೀಗೆ ಹೇಳುತ್ತದೆ, "ಅನಂತರದಲ್ಲಿ ಈ ದಾಸಿಯು ಮಕ್ಕಳನ್ನು ಹಡೆದ ಕಾರಣಕ್ಕೆ ತನ್ನ ಯಜಮಾನಿಗೆ ಸಮಾನ ಸ್ಥಾನದಲ್ಲಿರುವವಳು ಎಂದು ಹೇಳಿಕೊಂಡರೆ, ಆಕೆಯ ಯಜಮಾನಿಯು ಆಕೆಯನ್ನು ಮಾರಾಟ ಮಾಡದಿರಬಹುದು; ಆಕೆಯು ಅವಳ ಮೇಲೆ ದಾಸಿಯ-ಗುರುತನ್ನು ಹಾಕಿ ಆಕೆಯನ್ನು ದಾಸಿರೊಳಗೆ ಒಬ್ಬಳಂತೆ ಎಣಿಸುವಳು."[7] ಜ್ಞಾನೋಕ್ತಿ 30:23 ಲೋಕವು ಸಹಿಸಿಕೊಳ್ಳಲಾದಂಥ ನಾಲ್ಕು ವಿಧವಾದ ನಡವಳಿಕೆಗಳ ಪಟ್ಟಿ ಮಾಡುತ್ತದೆ, ಮತ್ತು ಅವುಗಳೊಳಗೆ ಒಂದು ಎಂದರೆ "ಸವತಿಯಾದ ತೊತ್ತು."

ಸಾರಳು ತನಗೆ ನ್ಯಾಯವನ್ನು ದೊರಕಿಸುವಂತೆ ಒಂದು ಅತ್ಯುನ್ನತ ನ್ಯಾಯಲಯಕ್ಕೆ ಮೊರೆಯಿಡುವವಳಾಗಿ, ಹೀಗೆ ಹೇಳಿದಳು, **ನಿನಗೂ ನನಗೂ ಯೆಹೋವನೇ ನ್ಯಾಯತೀರಿಸಲಿ.** ಆಕೆಯು ತನ್ನ ಗಂಡನನ್ನು ದೈವಿಕ ನ್ಯಾಯತೀರ್ಪಿಗೆ ಪ್ರತಿಕ್ರಿಯಿಸುವಂತೆ ಮಾಡಿ ಈ ದಾಸಿಯ ಮೇಲೆ ತನಗಿದ್ದ ಹಕ್ಕುಬದ್ಧ ಸ್ಥಾನವನ್ನು ಪುನಃ ಒದಗಿಸಿ ಕೊಡುವಂತೆ ಮಾಡಿ ಆಕೆಯ ದುರಹಂಕಾರಕ್ಕೆ ಅಂತ್ಯ ಕಾಣಿಸಬೇಕೆಂದು ದೇವರಿಗೆ ಮೊರೆಯಿಡುತ್ತಿರುವಂತೆ ಕಾಣಿಸುತ್ತದೆ. ಈ ದೂರು ಹೇಳುವಿಕೆಯು ತನ್ನ ಮತ್ತು ಅಬ್ರಹಾಮನ ನಡುವೆ ನ್ಯಾಯತೀರಿಸಬೇಕೆಂದು ಯೆಹೋವನಿಗೆ ಮಾಡಿದ ಒಂದು ಪ್ರಾರ್ಥನೆ ಸಹ ಆಗಿತ್ತು.

**ವಚನ 6.** ಹಾಗರಳು ಯಜಮಾನಿಯ ಕಡೆಗೆ ತಾನೇ ಶ್ರೇಷ್ಠಳೆಂಬ ಮನೋಭಾವವನ್ನು ತೋರ್ಪಡಿಸಿಕೊಂಡಾಗ, ಅಬ್ರಹಾಮನು ಆಕೆಯ ಮೇಲೆ ತನಗಿದ್ದ ಕಾನೂನು ಅಧಿಕಾರವನ್ನು ತ್ಯಜಿಸಿ ಬಿಟ್ಟು ಸಾರಳಿಗೆ ಹೀಗೆ ಹೇಳಿದನು, **ನಿನ್ನ ದಾಸಿಯು ನಿನ್ನ ಕೈಯಲ್ಲೇ ಇದ್ದಾಳೆ;**

**ಮನಸ್ಸುಬಂದಂತೆ** [טוֹב, *ಟೊಬ*] **ಮಾಡು.** ಈ ವಿಧವಾದ ಮೃದು ಉತ್ತರವನ್ನು ತನ್ನ ಹೆಂಡತಿಗೆ ಕೊಡುವ ಮೂಲಕ, ಮೂಲಪಿತೃವು ಹಾಗರಳ ವಿಷಯದಲ್ಲಿ ಸಾರಳು ಕಠೋರವಾಗಿ ನಡೆದುಕೊಳ್ಳಲಾರಳು ಎಂದು ನಿರೀಕ್ಷಿಸಿದ್ದನು, ಆದರೆ ಬದಲಾಗಿ, ಆಕೆಯ ವಿಷಯದಲ್ಲಿ ಕರುಣೆಯಿಂದ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವಳೆಂದು ಎದುರು ನೋಡಿದನು. ಹೇಗೂ, ಅದು ಒಂದು ಸುಳ್ಳು ನಿರೀಕ್ಷೆಯಾಗಿತ್ತೆಂಬುದು ಸಾಭಿತಾಗಿತ್ತು; ಬದಲಾಗಿ, ಸಾರಳು **ಅವಳನ್ನು ಬಾಧಿಸಲು** ಮುಂದಾಗಿದ್ದಳು. ಆಕೆಯು ಹಾಗರಳನ್ನು ಬಾಧಿಸಿದ್ದರ ಬಗ್ಗೆ ಬಣ್ಣಿಸುವ ಪದವಾದ עָנָה *(ಅನಾಹ)* ಎಂಬುದರ ಪ್ರಾಥಮಿಕ ಅರ್ಥವು, ವಾಸ್ತವಿಕವಾಗಿ "ಒತ್ತಾಯಿಸು," ಅಥವಾ "ದಂಡಿಸು ಅಥವಾ ನೋವುಂಟು ಮಾಡು"[8] ಎಂದಾಗಿರುತ್ತದೆ. ಇದೇ ಪದವು ಇಸ್ರಾಯೇಲ್ಯರು ದಾಸತ್ವದಲ್ಲಿದ್ದ ವೇಳೆ ಅವರಿಗೆ ಐಗುಪ್ತರು ಮಾಡಿದ ಕೃತ್ಯವನ್ನು ಬಣ್ಣಿಸುತ್ತದೆ (ವಿಮೋಚನಕಾಂಡ 1:11, 12). ನಿಖರವಾಗಿ ಯಾವ ವಿಧವಾದ ಬಾಧೆಯನ್ನು ನೀಡಿದಳೆಂಬುದು ತಿಳಿದು ಬಂದಿರುವದಿಲ್ಲ, ಆದರೆ ಸಾರಳು ಹಾಗರಳ ಕಡೆಗೆ ಎಷ್ಟೊಂದು ಕೆಟ್ಟದ್ದಾಗಿ ನಡೆದುಕೊಂಡಳೆಂದರೆ ಆಕೆಯು ಬೇರೆ ದಾರಿ ಕಾಣದೆ ಅರಣ್ಯದೊಳಗೆ, ಆಕೆಯ ಸ್ವದೇಶವಾದ ಐಗುಪ್ತದ ಕಡೆಗೆ **ಓಡಿಹೋದಳು** (16:1, 7).

## ಇಸ್ಮಾಯೇಲನ ಜನನ (16:7-16)

**7ಅವಳು ಮರಳುಕಾಡಿನಲ್ಲಿ ಶೂರಿನ ಮಾರ್ಗದ ಒರತೆಯ ಹತ್ತಿರ ಇರುವಾಗ ಯೆಹೋವನ
ದೂತನು ಅವಳನ್ನು ಕಂಡು - 8ಸಾರಯಳ ದಾಸಿಯಾದ ಹಾಗರಳೇ, ಎಲ್ಲಿಂದ ಬಂದಿ? ಎಲ್ಲಿಗೆ
ಹೋಗುತ್ತೀ ಎಂದು ಕೇಳಲು ಅವಳು - ನನ್ನ ಯಜಮಾನಿಯಾದ ಸಾರಯಳ ಬಳಿಯಿಂದ
ಓಡಿಹೋಗುತ್ತಾ ಇದ್ದೇನೆ ಅಂದಳು. 9ಅದಕ್ಕೆ ಯೆಹೋವನ ದೂತನು - ನೀನು ಯಜಮಾನಿಯ
ಬಳಿಗೆ ಹಿಂದಿರುಗಿ ಹೋಗಿ ಅವಳಿಗೆ ತಗ್ಗಿ ನಡೆದುಕೋ ಅಂದನು. 10ಅದಲ್ಲದೆ ಯೆಹೋವನ
ದೂತನು ಅವಳಿಗೆ - ನಿನಗೆ ಬಹುಸಂತಾನವಾಗ ಮಾಡುವೆನು; ಅದು ಲೆಕ್ಕಿಸಕೂಡದಷ್ಟು
ಅಪರಿಮಿತವಾಗುವದು ಎಂದು ಹೇಳಿದನು. 11ಮತ್ತು ಯೆಹೋವನ ದೂತನು ಅವಳಿಗೆ - ನೀನು
ಬಸುರಾಗಿದ್ದೀಯಷ್ಟೆ; ನಿನಗೆ ಮಗನು ಹುಟ್ಟುವನು; ಯೆಹೋವನು ನಿನ್ನ ಕಷ್ಟದ ಕೂಗಿಗೆ
ಕಿವಿಗೊಟ್ಟದ್ದರಿಂದ ಆ ಮಗನಿಗೆ ಇಷ್ಮಾಯೇಲ್ ಎಂದು ಹೆಸರಿಡಬೇಕು. 12ಅವನು
ಕಾಡುಗತ್ತೆಯಂತೆ ಇರುವನು. ಅವನು ಎಲ್ಲರ ಮೇಲೆ ಕೈಯೆತ್ತುವನು; ಹಾಗೆಯೇ ಅವನ ಮೇಲೆ
ಎಲ್ಲರೂ ಕೈಯೆತ್ತುವರು. ತನ್ನ ಅಣ್ಣತಮ್ಮಂದಿರ ಎದುರುಗಡೆಯೇ ವಾಸವಾಗಿರುವನು ಎಂದು
ಹೇಳಿ ಹೋದನು. 13ಅವಳು - ನನ್ನನ್ನು ನೋಡುವಾತನನ್ನು ನಾನು ಇಲ್ಲಿಯೂ ನೋಡಿದ್ದೇನಲ್ಲಾ
ಅಂದುಕೊಂಡು ತನ್ನ ಸಂಗಡ ಮಾತಾಡಿದ್ದ ಯೆಹೋವನಿಗೆ [ಎಲ್ಲವನ್ನೂ] ನೋಡುವ
ದೇವರೆಂದು ಹೆಸರಿಟ್ಟಳು. 14ಈ ಸಂಗತಿಯಿಂದ ಅಲ್ಲಿರುವ ಬಾವಿಗೆ ಲಹೈರೋಯಿ ಬಾವಿ ಎಂದು
ಹೆಸರಾಯಿತು; ಅದು ಕಾದೇಶಿಗೂ ಬೆರೆದಿಗೂ ನಡುವೆ ಅದೆ. 15ಹಾಗರಳು ಅಬ್ರಾಮನಿಂದ
ಮಗನನ್ನು ಹೆತ್ತಳು; ಅಬ್ರಾಮನು ಅವನಿಗೆ ಇಷ್ಮಾಯೇಲ್ ಎಂದು ಹೆಸರಿಟ್ಟನು. 16ಅವಳು
ಇಷ್ಮಾಯೇಲನನ್ನು ಹೆತ್ತಾಗ ಅಬ್ರಾಮನು ಎಂಭತ್ತಾರು ವರುಷದವನಾಗಿದ್ದನು.**

**ವಚನ 7.** ಹಾಗರಳು ಸಾರಳಿಂದ ದೂರವಾಗಿ ಓಡಿ ಹೋಗುತ್ತಿದ್ದ ವೇಳೆ, ಕಥಾನಿರೂಪಣೆಯು ಹೇಳುವದೇನೆಂದರೆ **ಅವಳು ಮರಳುಕಾಡಿನಲ್ಲಿ ಶೂರಿನ ಮಾರ್ಗದ ಒರತೆಯ ಹತ್ತಿರ ಇರುವಾಗ ಯೆಹೋವನ ದೂತನು ಅವಳನ್ನು ಕಂಡನು.** "ಯೆಹೋವನ ದೂತನು" ಎಂಬ ಪದಗುಚ್ಛವು ಹಳೆಯ ಒಡಂಬಡಿಕೆಯಲ್ಲಿ ಐವತ್ತೆಂಟು ಸಾರಿ ಬಳಸಲ್ಪಟ್ಟಿದೆ.

ಕೆಲವು ಸಾರಿ ಇದು ದೇವರ ವೈಯಕ್ತಿಕ ಮಧ್ಯಸ್ಥನಾಗಿ (ಪ್ರತಿನಿಧಿ) ಭೂಮಿಗೆ ಕಳುಹಿಸಲ್ಪಡುವ ಒಬ್ಬ ಪರಲೋಕದ ಜೀವಿಯನ್ನು ಸೂಚಿಸುತ್ತದೆ. ಪ್ರಾಚೀನ ಮಧ್ಯಪ್ರಾಚ್ಯದಲ್ಲಿ, ಒಬ್ಬ ರಾಜವಂಶ ದೂತನನ್ನು ಸ್ವತಃ ರಾಜನ ಬದಲಿಗೆ ಬಂದವನು ಎಂಬುದಾಗಿ ಪರಿಗಣಿಸಬೇಕಾಗಿತ್ತು. ಯೆಹೋವನ "ದೂತ" (מַלְאָךְ, *ಮಲಾಕ*, "ಸಂದೇಶಕ") ಎಂಬವನು ಶಾಸ್ತ್ರಗಳಲ್ಲಿ ಸಾಮಾನ್ಯವಾಗಿ ದೇವರನ್ನು ಪ್ರತಿನಿಧಿಸುವವನಾಗಿ, ದೇವರ ಪರವಾಗಿ ಮಾತಾಡುವವನಾಗಿ, ಮತ್ತು ದೇವರ ಮಹಿಮೆಯಲ್ಲಿ ಸ್ವಲ್ಪನ್ನು ತೋರ್ಪಡಿಸುವವನಾಗಿ ಕಾಣಿಸಿಕೊಳ್ಳುತ್ತಾನೆ.

ಹೇಗೂ, ಬೈಬಲಿನ ಕಥಾನಿರೂಪಣೆಗಳಲ್ಲಿ "ಯೆಹೋವನ ದೂತ" ನು ಅನೇಕ ಸಾರಿ ದೇವರಂತೆ ಮಾತಡಿದನು ಮತ್ತು ದೇವರಂತೆ ಕಾಣಿಸಿಕೊಂಡನು. ಅಂಥ ವ್ಯಕ್ತಿಯನ್ನು ಕಂಡವರು ತಾವು ದೇವರನ್ನೇ ನೋಡಿದ್ದೇವೆಂದು ಆಶ್ಚರ್ಯಪಟ್ಟರು.[9] ಹಾಗಾದರೆ, ಯೆಹೋವನ ದೂತನು ಯೆಹೋವನ ಗೋಚರವಾದ ಪ್ರತ್ಯಕ್ಷತೆ - ಥಿಯೋಫನಿ - ಆಗಿರಬಹುದಾಗಿದೆ. ಕೆಲವು ಸಾರಿ ಆ ರೀತಿಯಲ್ಲಿ ಕಾಣಿಸಿಕೊಳ್ಳುವಿಕೆಯು ಮಾನವ ರೂಪವನ್ನು ಧರಿಸುವದಾಗಿತ್ತು, ಮತ್ತು ಇನ್ನು ಕೆಲವು ಸಂದರ್ಭಗಳಲ್ಲಿ ಜನರು ಒಂದು ಮಹಿಮೆಕರವಾದ, ಅಗ್ನಿಮಯ ಆಕಾರವನ್ನು ಕಂಡು ಅದನ್ನು ಸ್ವತಃ ದೇವರೇ ಆಗಿರುವೆನೆಂದು ಗ್ರಹಿಸಿಕೊಂಡಿದ್ದರು.

ಯೆಹೋವನ ದೂತನು ಹಾಗರಳನ್ನು **ಶೂರಿನ ಮಾರ್ಗದ ಒರತೆಯ ಹತ್ತಿರ** ಅರಣ್ಯದಲ್ಲಿ ಕಂಡನು ಎಂಬುದಕ್ಕೆ ಆಕೆಯು ವಿಶಿಷ್ಟವಾಗಿ ಆಶೀರ್ವದಿಸಲ್ಪಟ್ಟಿದ್ದಳು. "ಶೂರ" (שׁוּר, *ಶೂರ)* ಎಂಬ ಹೆಸರಿನ ಅರ್ಥವು "ಗೋಡೆ" ಎಂದಾಗಿದೆ (49:22; ಯೋಬ 24:11), ಮತ್ತು ಅದು ಬಹುಶಃ ಆಶಿಯಾಟಿಕ್ಕರ ದಾಳಿಯಿಂದ ಭದ್ರತೆಯನ್ನು ಒದಗಿಸಿದ್ದ ಐಗುಪ್ತದ ಪೂರ್ವದ ಗಡಿಯುದ್ದಕ್ಕೂ ಇದ್ದ ಕೋಟೆಗಳ ಸಾಲುಗಳನ್ನು ಸೂಚಿಸುತ್ತಿರಬಹುದಾಗಿದೆ (25:18; 1 ಸಮುವೇಲ 15:7). ಹಾಗರಳು ಒಬ್ಬಂಟಿಯಾಗಿ ಸೀನಾಯಿ ಮರುಭೂಮಿಯನ್ನು ಆಚೆಗೆ ಓಡಿ ಹೋಗುವ ಮೂರ್ಖ ಪ್ರಯತ್ನವನ್ನು ಮಾಡಿದ್ದಳು, ಯಾಕೆಂದರೆ ಕಾನಾನ್ ಮತ್ತು ಐಗುಪ್ತದ ನಡುವೆ ಸುಮಾರು ನೂರಕ್ಕೂ ಅಧಿಕ ಮೈಲಿಗಳ ವರೆಗೆ ನೀರು ಅತ್ಯಂಥ ವಿರಳವಾಗಿರುತ್ತಿತ್ತು ಹಾಗೂ ಆಹಾರವಂತೂ ಹೆಚ್ಚುಕಡಿಮೆ ಅಲ್ಲಿರುತ್ತಲೇ ಇರಲಿಲ್ಲ.

**ವಚನ 8.** ಯೆಹೋವನ ದೂತನು **ಹಾಗರ**ಳನ್ನು ಭೇಟಿಯಾದ ವೇಳೆ, ಅವಳು **ಸಾರಯಳ ದಾಸಿ** ಎಂಬುದು ಆತನಿಗೆ ಈಗಾಗಲೇ ಗೊತ್ತಿತ್ತು; ಮತ್ತು ಆಕೆಯ ತೊಳಲಾಟದ ಪರಿಸ್ಥಿತಿಗಳೇನೆಂಬುದು ಆತನಿಗೆ ತಿಳಿದಿತ್ತು. ಆದದರಿಂದ, **ಎಲ್ಲಿಂದ ಬಂದಿ? ಎಲ್ಲಿಗೆ ಹೋಗುತ್ತೀ** ಎಂಬ ಎರಡು ವಿಧದ ಪ್ರಶ್ನೆಗಳು ಶಬ್ದಾಡಂಬರದಿಂದ ಕೂಡಿತ್ತು. ಆಕೆಯು ಅಬ್ರಹಾಮನ ಮನೆಯವರನ್ನು ತೊರೆದು ಬರಬೇಕೆಂದು ಮಾಡಿಕೊಂಡ ತೀರ್ಮಾನದ ಕುರಿತು ಮರುಚಿಂತನೆ ಮಾಡುವಂತೆ ನಡಿಸುವದಕ್ಕೆ ಆ ಪ್ರಶ್ನೆಯು ಕೇಳಲ್ಪಟ್ಟಿತ್ತು. ಹಾಗರಳು ಸತ್ಯವಾಗಿಯೇ ಉತ್ತರಿಸಿದನು, **ನನ್ನ ಯಜಮಾನಿಯಾದ ಸಾರಯಳ ಬಳಿಯಿಂದ ಓಡಿಹೋಗುತ್ತಾ ಇದ್ದೇನೆ**.

**ವಚನ 9.** ಇದನ್ನು ಕೇಳಿದಾಗ, ಆಕೆಗೆ **ದೂತನು - ನೀನು ಯಜಮಾನಿಯ ಬಳಿಗೆ ಹಿಂದಿರುಗಿ ಹೋಗಿ ಅವಳಿಗೆ ತಗ್ಗಿ ನಡೆದುಕೋ** ಅಪ್ಪಣೆ ಕೊಟ್ಟನು. ಹಾಗರಳು ತನ್ನನ್ನು ತಗ್ಗಿಸಿಕೊಂಡು ಸಾರಳಿಗೆ ಅಧೀನಳಾಗಿರುವದಕ್ಕಾಗಿ ಪುನಃ ಹಿಂದಿರುಗಿ ಹೋಗುವುದು ಆಕೆಗೆ ಹಿಡಿಸದ ವಿಚಾರವಾಗಿತ್ತು, ಆದರೆ ನಿರ್ಜನವಾದ ಅರಣ್ಯದಲ್ಲಿ ಅವಳಿಗೆ ನಿಶ್ಚಿತವಾಗಿ ಕಾದಿದ್ದ ಮರಣಕ್ಕಿಂತಲೂ ಅದೊಂದು ಅತ್ಯುತ್ತಮವಾದ ಆಯ್ಕೆಯಾಗಿತ್ತು.

**ವಚನ 10. ಯೆಹೋವನು ಅವಳಿಗೆ ಬಹುಸಂತಾನವಾಗ ಮಾಡುವನು;** [ಆಗ] **ಅದು ಲೆಕ್ಕಿಸಕೂಡದಷ್ಟು ಅಪರಿಮಿತವಾಗುವದು** ಎಂಬುದಾಗಿ **ದೂತನು** ಆಕೆಗೆ ಹೇಳಿದನು. ದೇವರು ಅಬ್ರಹಾಮನಿಗೆ ಇದೇ ರೀತಿಯ ವಾಗ್ದಾನವನ್ನು ಮಾಡಿದನಾದರೂ (13:16; 15:5), ಅಂಥ ವಾಗ್ದಾನವನ್ನು ದೇವರು ನೇರವಾಗಿ ಮಾಡಿದ ಸ್ತ್ರೀಯು ಹಳೆಯ ಒಡಂಬಡಿಕೆಯಲ್ಲಿ ಹಾಗರಳು ಮಾತ್ರವೇ ಆಗಿರುತ್ತಾಳೆ. ಪ್ರಾಚೀನ ಕಾಲದಲ್ಲಿ ಸಂಭವಿಸುತ್ತಿದ್ದ ಗರ್ಭಪಾತ ಮತ್ತು ಹೆರಿಗೆ ವೇಳೆ ನಡೆಯುವ ಮರಣಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುವದಾದರೆ, ಆಕೆಗೆ ಆರೋಗ್ಯಕರ ಮಗುವು ಹುಟ್ಟಿ ಆತನಿಗೆ ಅಸಂಖ್ಯಾತ ಸಂತತಿಯವರು ಆಗುವರೆಂಬ ಈ ವಾಗ್ದಾನವು ಹುರುಪನ್ನು ತುಂಬಿ ಪುನಃ ಕಾನಾನಿಗೆ ಹಿಂದಿರುಗಬೇಕೆಂಬ ದೃಢಸಂಕಲ್ಪವನ್ನು ಅವಳಲ್ಲಿ ಉಂಟು ಮಾಡಿರಬಹುದು.

**ವಚನ 11. ದೂತನು** ಆಕೆಯೊಂದಿಗೆ ಮಾತಾಡಿದನು, ಆಕೆಯು ಬಸುರಾಗಿದ್ದಾಳೆಂಬುದನ್ನು ಸೂಚಿಸಿದನು. ಆಗ ಆತನು ಅವಳಿಗೆ **ಮಗನು ಹುಟ್ಟುವನು** ಎಂದು ಹೇಳಿದನು. ಈ ಮಾತುಗಳು ಆಕೆಗೆ ಕಾಣಿಸಿಕೊಂಡಿದ್ದ ನಿಗೂಢ ವ್ಯಕ್ತಿಯು ಕೇವಲ ಆಕೆಯು ಅರಣ್ಯದಲ್ಲಿ ಅತಿಯಾದ ಬಿಸಿಲಿನ ತಾಪಕ್ಕೆ ಸಿಲುಕಿ ಅನುಭವಿಸಿದ ಭ್ರಾಂತಿಸ್ವರೂಪ ಆಗಿರಲಿಲ್ಲ ಎಂಬುದಕ್ಕೆ ಪುರಾವೆಯನ್ನು ಒದಗಿಸುತ್ತದೆ. ಇದು ದೇವರಿಂದಲೇ ಬಂದ ಪ್ರಕಟನೆ ಆಗಿರತಕ್ಕದ್ದು, ಆತನಿಗೊಬ್ಬನಿಗೆ ಮಾತ್ರವೇ ಹುಟ್ಟದೆ ಇರುವ **ಮಗು**ವಿನ ಲಿಂಗವನ್ನು ತಿಳಿದಿರಲು ಸಾಧ್ಯ ಎಂದು ಅವಳಿಗೆ ಗೊತ್ತಿತ್ತು. ಕೊನೆಗೂ, ಅಬ್ರಹಾಮನಿಗೆ ವಾಗ್ದಾನ ಮಾಡಲ್ಪಟ್ಟಿದ್ದ ಬಾಧ್ಯಸ್ತನು ಒದಗಿಸಲ್ಪಟ್ಟಿರುವಂತೆ ಕಂಡಿತ್ತು, ಅಬ್ರಹಾಮನ ವಯಸ್ಸು ಆಗ ಎಂಭತ್ತಾರು ವರ್ಷ ಆಗಿತ್ತು (16:16); ಮತ್ತು ಒಬ್ಬ ಬದಲಿ ತಾಯಿಯಾಗಿ ತನ್ನ ಪಾತ್ರವು ಖಂಡಿತವಾಗಿಯೂ ಯಶಸ್ವಿಯಾಗಿತ್ತೆಂದು ಹಾಗರಳು ಅಂದುಕೊಂಡಳು.

ಅದರ ಜೊತೆಗೆ, ದೂತನು ಹಾಗರಳಿಗೆ ತಿಳಿಯಪಡಿಸಿದ್ದೇನೆಂದರೆ ಮಗುವಿಗೆ **ಇಸ್ಮಾಯೇಲ್** ಎಂದು **ಹೆಸರಿಡಬೇಕು**. ಅದಕ್ಕೆ ಆತನು ಒಂದು ಕಾರಣವನ್ನು ಕೊಟ್ಟನು: **ಯೆಹೋವನು ನಿನ್ನ ಕಷ್ಟದ ಕೂಗಿಗೆ ಕಿವಿಗೊಟ್ಟನು.** "ಇಸ್ಮಾಯೇಲ್" (יִשְׁמָעֵאל, *ಯಿಸ್ಮಾಯೇಲ*) ಎಂಬ ಹೆಸರಿನ ಅರ್ಥವು "ದೇವರು ಕೇಳುವವನು" ಅಥವಾ "ದೇವರು ಆಲಿಸಿದ್ದಾನೆ." ಇದು ಸಾಮಾನ್ಯ ವಿಧವಾದ ಇಬ್ರಿಯ ಶಬ್ದಾಡಂಬರವಾಗಿರುತ್ತದೆ, ಇಲ್ಲಿ ಯೆಹೋವನು ಹಾಗರಳ ಬಾಧೆಯನ್ನು, ಅಂದರೆ, ಆಕೆಯ ಯಜಮಾನಿಯಾದ ಸಾರಳು ಆಕೆಗೆ ನೀಡಿದ್ದ ಕಿರುಕಳವನ್ನು ಆಲಿಸಿದ್ದನು.

**ವಚನ 12.** ಹಾಗರಳಿಗೆ ಬಣ್ಣಿಸಲ್ಪಟ್ಟ ಪ್ರಕಾರ, ಮಗುವಿನ ದೈವವಿಧಿ, ಗುಣಸ್ವಭಾವ, ಮತ್ತು ಅಂತ್ಯಾವಸ್ಥೆಗಳು ಒಬ್ಬ ತಾಯಿಯು ಬಯಸಿದ್ದಕ್ಕಿಂತಲೂ ಬಹಳ ವ್ಯತ್ಯಾಸವಾಗಿದ್ದವು. ದೂತನ ಮಾತಿನ ಪ್ರಕಾರವಾಗಿ, **ಅವನು ಕಾಡುಗತ್ತೆಯಂತೆ ಇರುವನು. ಅವನು ಎಲ್ಲರ ಮೇಲೆ ಕೈಯೆತ್ತುವನು; ಹಾಗೆಯೇ ಅವನ ಮೇಲೆ ಎಲ್ಲರೂ ಕೈಯೆತ್ತುವರು. ತನ್ನ ಅಣ್ಣತಮ್ಮಂದಿರ ಎದುರುಗಡೆಯೇ ವಾಸವಾಗಿರುವನು.** "ಕಾಡುಗತ್ತೆ" ಎಂಬ ಅರ್ಥವಿರುವಂಥ (ಯೆರೆಮೀಯ 2:24; ಹೋಶೇಯ 8:9), פֶּרֶא *(ಪೆರೆ)* ಎಂಬ ಪದವು ಇಸ್ಮಾಯೇಲನ ವಿಷಯದಲ್ಲಿ ಸಾಂಕೇತಿಕವಾಗಿ ಬಳಸಲ್ಪಟ್ಟಿದೆ; ಅರಣ್ಯದಲ್ಲಿ ಜೀವಿಸುವವನಾಗಿ ಆತನೊಬ್ಬ "ಸ್ವತಂತ್ರ ಅಲೆಮಾರಿ"[10] ಆಗಿರುವನು. ಇಲ್ಲಿ ಗುರುತಿಸಲಾಗಿರುವ ಜೀವಿಯು ಕತ್ತೆಗಿಂತಲೂ ಅಧಿಕವಾಗಿ ಒಂದು ಕುದುರೆಯಂತೆ ಕಾಣಿಸುವದಾಗಿದೆ, ಆದರೆ ಪಳಗಿಸಲ್ಪಡುವಿಕೆಯನ್ನು ವಿರೋಧಿಸುವದಾಗಿದೆ (ಯೋಬ 39:5-8). ಆ ರೀತಿಯಲ್ಲಿಯೇ ಇಸ್ಮಾಯೇಲನು ಒಬ್ಬ ಕಾಡು ಮನುಷ್ಯನಂತಿರುವನು, ನಾಗರೀಕತೆಯನ್ನು ಮತ್ತು ಸಾಮಾಜಿಕವಾಗಿ ಕೂಡಿ ಬರುವದನ್ನು

ವಿರೋಧಿಸುವವನಾಗಿರುವನು. ಆತನು ಒಂದು ದುರಹಂಕಾರ, ಮೊಂಡುತನ ಮನೋಭಾವವಿರುವದು ಮತ್ತು ಸಮಾಜದೊಂದಿಗೆ ಹೊಂದಿಕೊಂಡು ಹೋಗಲು ನಿರಾಕರಿಸುವನು. ಆತನು ಪ್ರತಿಯೊಬ್ಬರ ವೈರಿಯಂತೆ ಜೀವಿಸುವನು, ಯಾರೊಂದಿಗೂ ಹೊಂದಿಕೆಯಾಗುವದಕ್ಕೆ ನಿರಾಕರಿಸುವನು; ಮತ್ತು ಎಲ್ಲರೂ ಆತನನ್ನು ಅಂಥವನನ್ನಾಗಿಯೇ ಕಾಣುವರು.

ಈ ಕಾರಣಕ್ಕಾಗಿ, ಇಸ್ಮಾಯೇಲನು **ಅಣ್ಣತಮ್ಮಂದಿರ ಎದುರುಗಡೆಯಯೇ** [ಪೂರ್ವದಿಕ್ಕಿಗೆ] **ವಾಸವಾಗಿರುವನು**, ಮಹಾ ಅರಬ್ಬಿಯನ್ ಮರುಭೂಮಿಯ ತುದಿಗಳಲ್ಲಿ, ಕಾನಾನ್ ದೇಶದ ಪೂರ್ವ ದಿಕ್ಕಿನ ದೇಶವನ್ನು ಆಕ್ರಮಿಸಿಕೊಂಡಿರುವನು. ಈ ಪ್ರವಾದನೆಯು ಮೆಸಪೊಟಾಮ್ಯದಿಂದ ಐಗುಪ್ತದೊಳಗೆ ಮಹಾ ಮರುಭೂಮಿಗಳನ್ನು ದಾಟಿ ಬಂದ ಇಸ್ಮಾಯೇಲ್ಯರ ಚಾವಣಿ - ಗಾಡಿಗಳಿಗೆ ಸಹ ಅನ್ವಯವಾಗಬಹುದಾಗಿದೆ, ಕೆಲವು ಸಾರಿ ಅವರು ಮಾನವ ಗುಲಾಮರನ್ನು ಕಳ್ಳತನದಿಂದ ಸಾಗಾಟ ಮಾಡುತ್ತಿದ್ದರು (37:25-28; 39:1). ಇತರ ಇಸ್ಮಾಯೇಲ್ಯರು, ಬೆಡೊವಿನ್ ಗುಂಪುಗಳ ಜೊತೆಗೂಡಿ ಕಾನಾನಿನಲ್ಲಿ ಶಾಶ್ವತವಾಗಿ ನೆಲೆಸಿದ್ದವರ ಮೇಲೆ ದಾಳಿ ಮಾಡಿ ಕೊಳ್ಳೆ ಹೊಡೆದರು (ನ್ಯಾಯಸ್ಥಾಪಕ 7:12; 8:24). ಹೇಗೂ, ಇಬ್ರಿಯ ವಾಕ್ಯವನ್ನು ವ್ಯತ್ಯಾಸವಾಗಿ ಅನುವಾದಿಸಬಹುದಾಗಿದೆ. "ಪೂರ್ವದಿಕ್ಕಿಗೆ" ಎಂಬ ಮಾತು עַל־פְּנֵי (*ಅಲ್ ಪೆನೇ*) ಎಂಬುದರಿಂದ ಬಂದಿದ್ದು, ಅದರ ಅಕ್ಷರಶಃ ಅರ್ಥವು "ಮುಖಕ್ಕೆ ಎದುರಾಗಿ" ಎಂದಾಗಿರುತ್ತದೆ. NIVಯು "ಅಣ್ಣತಮ್ಮಂದಿರ *ಕಡೆಗೆ ಹಗೆತನದಿಂದ* ಜೀವಿಸುನು" ಎಂದು ಹೇಳುತ್ತದೆ (ಒತ್ತಿ ಹೇಳಿದ್ದು ನನ್ನದು). ಈ ಅನುವಾದವು 16:12ನೇ ವಚನದ ಈ ಹಿಂದಿನ ಭಾಗಕ್ಕೆ ಉತ್ತಮವಾಗಿ ಸರಿಹೊಂದುತ್ತದೆ. ಅಷ್ಟುಮಾತ್ರವಲ್ಲದೆ, NASBಯು 25:18ರಲ್ಲಿನ ಈ ಪ್ರವಾದನೆಯ ನೆರವೇರಿಕೆಯನ್ನು "ಹೀಗೆ ಅವರಿಗೆ ತಮ್ಮ ಸಂಬಂಧಿಕರಿಗೆ *ಎದುರಿನಲ್ಲಿಯೇ* ವಾಸಸ್ಥಳ ಸಿಕ್ಕಿತು" ಎಂದು ಅನುವಾದಿಸುತ್ತದೆ (ಒತ್ತಿ ಹೇಳಿದ್ದು ನನ್ನದು).[11]

**ವಚನ 13.** ಈ ದೈವಿಕ ಮುಖಾಮುಖಿಯೊಂದಿಗೆ, ಹಾಗರಳು ಯೆಹೋವನನ್ನು ಆಲಿಸುವಾತನು (16:11) ಮತ್ತು **ನೋಡುವಾತನು** ಆಗಿರುವ ದೇವರೆಂದು ಗುರುತಿಸಿದಳು; ಆಕೆಯು ಬಾಧೆಯಲ್ಲಿ ಮತ್ತು ಅಸಹಾಯಕಳಾಗಿರುವ ಸ್ಥಿತಿಯನ್ನು ಆಲಿಸಿದನು ಮತ್ತು ನೋಡಿದನು. ಬಹುಶಃ ಆಕೆಯು "ಯೆಹೋವನು" ನನ್ನ ದೇವರೆಂದು ಅಬ್ರಹಾಮನು ಮಾತಾಡಿದ್ದನ್ನು ಕೇಳಿಸಿಕೊಂಡಿರಬಹುದು; ಮತ್ತು ದೇವದೂತನು ಅದೇ ಪದವನ್ನು ಬಳಸಿದಾಗ (יהוה, "ಯೆಹೋವನು"; 16:11), ಹಾಗರಳು **ತನ್ನ ಸಂಗಡ ಮಾತಾಡಿದ್ದ ಯೆಹೋವನಿಗೆ** ಬೇಡಿಕೊಂಡಳು. ಆಕೆಯು ಹೀಗೆ ಹೇಳಿದಳು, **[ಎಲ್ಲವನ್ನೂ] ನೋಡುವ ದೇವರು.** ಇಬ್ರಿಯ ವಾಕ್ಯವನ್ನು ಅರ್ಥಮಾಡಿಕೊಳ್ಳುವುದು ಕಠಿಣವಾಗಿರುತ್ತದಾದರೂ, ಆಕೆಯ ಮುಂದಿನ ಹೇಳಿಕೆಯು, NIVಯಲ್ಲಿ ತಿಳಿಸಲ್ಪಟ್ಟಿರುವ ಪ್ರಕಾರ ಒಂದು ಒಪ್ಪಿಕೊಳ್ಳುವಿಕೆ ಮಾತ್ರವೇ ಆಗಿರಲಿಲ್ಲ. ಆಕೆಯು ಆಶ್ಚರ್ಯಗೊಂಡವಳಾಗಿ, **ನಾನು ಆತನನ್ನು ನೋಡಿದ ಬಳಿಕವೂ ಜೀವಂತವಾಗಿ ಉಳಿದಿದ್ದೇನೋ?**[12] ದೇವರನ್ನು ಅಥವಾ ಆತನ ದೈವಿಕ ಪ್ರತನಿಧಿಯನ್ನು ಮುಖಾಮುಖಿಯಾಗಿ ಸಂಧಿಸಿದವರು ಅನೇಕ ಸಾರಿ ಮರಣದ ಭಯವನ್ನು ಅನುಭವಿಸಿದರು; ಅವರು ಆತನ ಪರಿಶುದ್ಧ ಸನ್ನಿಧಾನದಲ್ಲಿ ತಮ್ಮ ಸಂಪೂರ್ಣ ಪಾಪಭರಿತತೆಯನ್ನು ಗುರುತಿಸಿಕೊಂಡರು (32:30; ನ್ಯಾಯಸ್ಥಾಪಕ 6:22, 23; 13:22; ಯೆಶಾಯ 6:5; ನೋಡಿರಿ ವಿಮೋಚನಕಾಂಡ 33:20).

**ವಚನ 14.** ಬಳಿಕ ಲೇಖಕನು **ಬಾವಿಯ** ಹೆಸರು **ಲಹೈರೋಯಿ** ಎಂದು ತಿಳಿಸಿದನು, ಇದು **ಕಾದೇಶಿಗೂ ಬೆರೆದಿಗೂ ನಡುವೆ ಅದೆ**. ಈ ಹೆಸರಿನ ಅರ್ಥವು ಒಂದು ರೀತಿಯಲ್ಲಿ "ನನ್ನನ್ನು

ನೋಡುವಾತನಾದ ಜೀವಿಸುವ(ವನ) ಬಾವಿ"[13] ಎಂದಾಗಿರುತ್ತದೆ. "ಕಾದೇಶ" ನೆಗೆವ್ (ದಕ್ಷಿಣ ಕಾನಾನ್) ಮತ್ತು ಜಿನ್ ಅರಣ್ಯಭೂಮಿಯ ನಡುವಿನ ಗಡಿಯಾಗಿತ್ತು (ನೋಡಿರಿ ಅರಣ್ಯಕಾಂಡ 13:21, 26), ಆದರೆ "ಲಹೈರೋಯಿ" ಹಾಗೂ "ಬೆರೆದ" ಎಂಬುವುಗಳು ನಿಖರವಾಗಿ ಯಾವ ಸ್ಥಳದಲ್ಲಿರುತ್ತವೆಂಬುದು ತಿಳಿದು ಬಂದಿರುವದಿಲ್ಲ. ಲಹೈರೋಯಿ ನೆಗೆವ್ ಎಂಬಲ್ಲಿ ಇದ್ದದ್ದ ನೀರಾವರಿ ಸ್ಥಳವಾಗಿದ್ದು ಅಲ್ಲಿಗೇ ಕೆಲವು ಸಾರಿ ಇಸಾಕನು ವಾಸಿಸುತ್ತಿದ್ದನು (24:62; 25:11).

**ವಚನ 15.** ಹಾಗರಳು ಅರಣ್ಯದಲ್ಲಿ ಹೊಂದಿದ ಅನುಭವದ - ಅದರಲ್ಲಿ ದೇವದೂತನು ಆಕೆಗೆ ಸಾರಳ ಬಳಿಗೆ ಹಿಂದಿರುಗುವಂತೆ ಬುದ್ಧಿವಾದ ಹೇಳಿದ್ದು ಮತ್ತು ಒಬ್ಬ ಮಗನ ಹಾಗೂ ಅನೇಕ ಸಂತತಿಯವರ ಕುರಿತು ವಾಗ್ದಾನ ಸೇರಿತ್ತು - ಬಳಿಕ, ಅಬ್ರಹಾಮನ ಐಗುಪ್ತದೇಶದ ಉಪಪತ್ನಿಯು ಆತನ ಮನೆಯ ಕಡೆಗೆ ಹಿಂದಿರುಗಿ ಪ್ರಯಾಣವನ್ನು ಆರಂಭಿಸಿದ್ದಳು. ಕಾಲವು ಬಂದಾಗ, **ಅಬ್ರಾಮನಿಂದ ಮಗನನ್ನು ಹೆತ್ತಳು**, ದೇವದೂತನು ಹೇಳಿದ್ದಂತೆಯೇ ಸಂಭವಿಸಿತ್ತು. ಆಕೆಯು ದೇವದೂತನ ಸಂದೇಶವನ್ನು (16:11) ನಿಸ್ಸಂದೇಹಕರವಾಗಿಯೂ ಅಬ್ರಹಾಮನಿಗೆ ತಿಳಿಸಿದ್ದಳು, ಯಾಕೆಂದರೆ ಆತನು **ಅವನಿಗೆ ಇಷ್ಮಾಯೇಲ್ ಎಂದು ಹೆಸರಿಟ್ಟನು**. ಹುಡುಗನಿಗೆ ಹೆಸರನ್ನು ಇಡುವ ಮೂಲಕ, ಅಬ್ರಹಾಮನನ್ನು ಆ ಹುಡುಗನನ್ನು ತನ್ನ ಮಗನೆಂದು ಮತ್ತು ಕಾನೂನುಬದ್ಧ ಬಾಧ್ಯಸ್ಥನೆಂದು ಅಂಗೀಕರಿಸಿಕೊಂಡಿದ್ದನು.[14]

**ವಚನ 16.** ಅಬ್ರಹಾಮನಿಗೆ ಅನಂತರದಲ್ಲಿ ಸಾರಳಿಂದ ಮಗನು ಹುಟ್ಟುವ*ದಾದರೆ* ಈ ದಾಸಿಯ ಮಗನು ತನ್ನ ತಂದೆಗೆ ಸೇರಿರುವ ಸಕಲವನ್ನು ಬಾಧ್ಯವಾಗಿ ಹೊಂದುವದಕ್ಕೆ ಮೊದಲಿನ ಸಾಲಲ್ಲಿ ಇರುವದಕ್ಕೆ ಆಗುತ್ತಿರಲಿಲ್ಲ, ಆದರೆ ಅಂಥ ಒಂದು ಘಟನೆಯು ನಡೆಯುವುದು ಮಾನವರ ಪ್ರಕಾರ ಸಾಧ್ಯತೆಯ ವ್ಯಾಪ್ತಿಯನ್ನು ಮೀರಿದ್ದಾಗಿತ್ತು. **ಇಸ್ಮಾಯೇಲ** ಹುಟ್ಟಿದ ವೇಳೆ ಅಬ್ರಹಾಮನು **ಎಂಭತ್ತಾರು ವರುಷದವನಾಗಿದ್ದನು**, ಮತ್ತು ಸಾರಳು ಎಪ್ಪತ್ತಾರು ವರುಷದವಳಾಗಿದ್ದಳು.

## ಅನ್ವಯಿಸುವಿಕೆ

### ಮಾರ್ಗವನ್ನು ಬಿಟ್ಟು ಒಂದು ಅಡ್ಡದಾರಿಯನ್ನು ಹಿಡಿಯುವಾಗ (ಅಧ್ಯಾಯ 16)

ಅನೇಕ ಜನರಿಗೆ ಪ್ರಯಾಣಿಸುತ್ತಿರುವ ವೇಳೆ ಏಕಾಏಕಿ "ಅಡ್ಡರಸ್ತೆಗೆ ಸಾಗಿರಿ" ಎಂಬ ಫಲಕವು ಎದುರಾದಂಥ ಅನುಭವ ಇರುತ್ತದೆ. ಇಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಅಷ್ಟಾಗಿ ಉತ್ತಮವಾಗಿರಬಹುದೆಂದು ತೋರದಂಥ ರಸ್ತೆಯ ಕಡೆಗೆ ಸಾಗಬೇಕಾಗಿರುತ್ತದೆ, ಹಾಗಿದ್ದರೂ ಈ ಪರ್ಯಾಯ ರಸ್ತೆಯು ನೀವು ಸೇರಬೇಕಾದ ಮೂಲ ಸ್ಥಳಕ್ಕೆ ನಡಿಸುತ್ತದೆ ಎಂಬ ಭರವಸವನ್ನು ಹುಟ್ಟಿಸುವದು ಆ ಫಲಕದ ಉದ್ದೇಶವಾಗಿರುತ್ತದೆ. ಆ ಒರಟಾದ ರಸ್ತೆಯಲ್ಲಿ ಕೆಲವು ಮೈಲಿಗಳ ವರೆಗೆ ಪ್ರಯಾಣಿಸಿದ ಬಳಿಕ, ಬದಲಿ ರಸ್ತೆಗೆ ಬಂದಿರುವ ಕಾರಿನಲ್ಲಿರುವವರು ಆ ಫಲಕಗಳ ಬಗ್ಗೆ ಪ್ರಶ್ನೆಯನ್ನು ಎತ್ತಲಾರಂಭಿಸುತ್ತಾರೆ. ತಾವು ಕಳೆದು ಹೋಗಿದ್ದೇವೆ ಎಂದು ಯೋಚಿಸಬಹುದು ಮತ್ತು ತಮಗಾಗಿರುವ ದುಸ್ಥಿತಿಗೋಸ್ಕರ ಯಾರಾದರೊಬ್ಬರನ್ನು ದೋಷಿಯನ್ನಾಗಿ ಮಾಡಬೇಕೆಂದು ಬಯಸುತ್ತಾರೆ. ಒಂದು ದೀರ್ಘವಾದ ಬಳಸುದಾರಿಯಲ್ಲಿ ಸಾಗುತ್ತಲಿರುವುದು ಒಂದು ಬಳಲಿಕೆಯುಂಟು ಮಾಡುವ ಅನುಭವವಾಗಬಲ್ಲದು.

ಆದಿಕಾಂಡ 16ರಲ್ಲಿ, ಅಬ್ರಹಾಮ, ಸಾರಳು, ಮತ್ತು ಹಾಗರಳು ತಮ್ಮ ಜೀವಿತಗಳಲ್ಲಿ ಅಡ್ಡದಾರಿಯೊಂದನ್ನು ಹಿಡಿದರು, ಒಂದು ತಪ್ಪಾದ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದರು, ಆರಂಭದಲ್ಲಿ ಅವರಿಗೆ ಅದು ಸರಿಯಾದ ಮಾರ್ಗ ಎಂಬಂತೆ ಕಂಡಿತ್ತು. ಅವರ ಸಮಸ್ಯೆಗೆ

ನಿವಾರಣೆಯನ್ನು ಉಂಟು ಮಾಡುವದರ ಬದಲಾಗಿ, ಸಾರಳು ದೇವರ ವಾಗ್ದಾನವನ್ನು ನೆರವೇರಿಸಬೇಕೆಂದು ತೆಗೆದುಕೊಂಡ ಪರ್ಯಾಯ ಮಾರ್ಗವು ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸಿತ್ತು ಮತ್ತು ಅವರ ಮನೆಯಲ್ಲಿ ಕಲಹಗಳಿಗೆ ದಾರಿ ಮಾಡಿತ್ತು. ಇದು ಸಂಬಂಧ ಪಟ್ಟವರೆಲ್ಲರಿಗೂ ಒಂದು ವಿನಾಶಕರ ಫಲಿತದೊಂದಿಗೆ ಮುಕ್ತಾಯಗೊಂಡಿರುವ ಸಾಧ್ಯತೆಯಿತ್ತು. ಈ ಬೈಬಲಿನ ಘಟನಾವಳಿಯಲ್ಲಿ, ಮಾನವನ ತರ್ಕದಲ್ಲಿ ಭರವಸವನ್ನು ಇಡುವುದರಲ್ಲಿರುವ ಅಪಾಯವು ಸ್ಪಷ್ಟವಾಗಿ ತಿಳಿಯುತ್ತದೆ; ಈ ಜೀವನಶೈಲಿಯು ಮೂಲಪಿತೃವಿನ ಕುಟುಂಬದ ಮುಂದೆ ದೇವರು ತಿಳಿಸಿ ಕೊಟ್ಟಿದ್ದ ನಂಬಿಕೆ ನಡೆಗೆ ತದ್ವಿರುದ್ಧವಾಗಿತ್ತು. ಆತನು ಈಗಲೂ ತನ್ನ ಜನರನ್ನು ನಂಬಿಕೆಯಿಂದ ನಡೆಯುವ ಸವಾಲನ್ನು ಸಂಧಿಸುವಂತೆ ಕರೆಯುವವನಾಗಿದ್ದಾನೆ. ನಂಬಿಕೆ ಎಂದರೆ ಅದಕ್ಕೆ ದೇವರ ವಾಗ್ದಾನಗಳ ನೆರವೇರಿಕೆಗೋಸ್ಕರ ಕಾಯುವ ತಾಳ್ಮೆಯು ಅಗತ್ಯವಿರುತ್ತದೆ ಎಂಬುದನ್ನು ಈ ಅಧ್ಯಾಯವು ಒತ್ತಿ ಹೇಳುತ್ತದೆ; ಮತ್ತು ಆತನು ತನ್ನದೇ ಆಗಿರುವ ವೇಳಾಪಟ್ಟಿಯನ್ನು ಹೊಂದಿರುತ್ತಾನೆ, ಅದಕ್ಕೂ ನಮ್ಮ ವೇಳಾಪಟ್ಟಿಗೂ ಬಹಳವಾದ ಭಿನ್ನತೆಯಿರಬಹುದಾಗಿದೆ ಎಂಬುದನ್ನು ಇದು ನಮಗೆ ಜ್ಞಾಪಿಸುತ್ತದೆ.

*ಸೂಕ್ತವಾದದ್ದೆಂದು ತೋರುವಂಥ ಒಂದು ದಾರಿಯಲ್ಲಿ ಪ್ರಯಾಣಿಸುವುದು.* ನಿಜವಾದ ನಂಬಿಕೆಯೆಂದರೆ ಒಂದು ಸಮಯದಲ್ಲಿ ಸೂಕ್ತವಾದದ್ದೆಂದು ಕಾಣಿಸುವಂತಹ ದಾರಿಯಲ್ಲಿ ಸಾಗುವದರ ಬದಲಾಗಿ ದೇವರ ಮುಂದೆ ಕಾದುಕೊಳ್ಳುವುದು ಅಗತ್ಯವಾಗಿರುತ್ತದೆ. ದಶಕಗಳ ತನಕ, ಯೆಹೋವನು ತನ್ನ ವಾಗ್ದಾನವನ್ನು ನೆರವೇರಿಸುವನು ಎಂಬುದಾಗಿ ಅಬ್ರಹಾಮ ಮತ್ತು ಸಾರಳರು ಕಾಯುತ್ತಲಿದ್ದರು. ದೇವರು ಆರಂಭದಲ್ಲಿ ಊರ್ ಪಟ್ಟಣದಿಂದ ಅವರನ್ನು ಕರೆದ ಸಮಯದಿಂದ ಇಷ್ಟರ ವರೆಗೆ ಎಷ್ಟು ವರ್ಷಗಳು ಗತಿಸಿದ್ದವು (11:31; 15:7; ಅಪೊಸ್ತಲರ ಕೃತ್ಯಗಳು 7:2, 3) ಮತ್ತು ಹಾರಾನ್ ಅವರ ದೇಶವೆಂದು ಪರಿಚಿತಗೊಳ್ಳುವ ಮುಂಚೆನಿಂದಲೂ ಅವರು ಅಲ್ಲಿ ಎಷ್ಟು ವರ್ಷಗಳ ಕಾಲ ವಾಸಿಸಿದ್ದರು (12:1-3; ಅಪೊಸ್ತಲರ ಕೃತ್ಯಗಳು 7:4) ಎಂಬುದನ್ನು ನಾವು ಕೇವಲ ಊಹಿಸಿಕೊಳ್ಳಬಲ್ಲೆವಷ್ಟೆ. ಇಷ್ಟೊತ್ತಿಗಾಗಲೆ, ಅವರು ಕಾನಾನ್ ದೇಶದಲ್ಲಿ ಹತ್ತು ವರ್ಷಗಳ ಕಾಲ ವಾಸಿಸಿದ್ದರು (16:3); ಅಬ್ರಹಾಮನು ಎಂಭತ್ತೈದು ವರ್ಷದವನಾಗಿದ್ದನು, ಮತ್ತು ಸಾರಳು ಎಪ್ಪತ್ತೈದು ವರ್ಷದವಳಾಗಿದ್ದಳು (ನೋಡಿರಿ 12:4; 17:17). ಹಾಗಿದ್ದರೂ, ಅವರಿಗೆ ಮಕ್ಕಳಿರಲಿಲ್ಲ. ಸಂಭಾವ್ಯ ಬಾಧ್ಯಸ್ಥನೆಂಬುದಾಗಿ ಎಲೀಯೆಜರನನ್ನು ಪಟ್ಟಿಯಿಂದ ಕೈ ಬಿಡಲಾಗಿತ್ತು, ಯಾಕೆಂದರೆ ವಾಗ್ದಾನ ಮಾಡಲ್ಪಟ್ಟಿರುವ ಬಾಧ್ಯಸ್ಥನು - ಯಾರ ಮೂಲಕವಾಗಿ ಭೂಲೋಕದ ಎಲ್ಲಾ ಕುಟುಂಬಗಳಿಗೆ ಆಶೀರ್ವಾದವಾಗುವದೋ ಆತನು - ಅಬ್ರಹಾಮನ "ಹೊಟ್ಟೆಯಲ್ಲೇ" ಹುಟ್ಟುವನು ಎಂಬುದಾಗಿ ದೇವರು ಹೇಳಿದ್ದನು (15:4).

ದೇವರ ವಾಗ್ದಾನವು, ವೃದ್ಧಳು ಮತ್ತು ಬಂಜೆ ಆಗಿದ್ದ ಹೇಗೆ ಸಾರಳ ಮೂಲಕವಾಗಿ ನೆರವೇರುವದಕ್ಕೆ ಸಾಧ್ಯವಿತ್ತು? ಆಕೆಯು ಉತ್ತರಗಳನ್ನು ಕಾನೂನಿನಲ್ಲಿ ಮತ್ತು ಪ್ರಾಚೀನ ಮೆಸಪೋತಾಮ್ಯದ ಪದ್ಧತಿಗಳೊಳಗೆ ಹುಡುಕಿದಳು, ಆ ಮೆಸಪೋತಾಮ್ಯದಿಂದಲೇ ಅವರ ಪ್ರಯಾಣವು ಆರಂಭಗೊಂಡಿತ್ತಷ್ಟೆ. ಅಬ್ರಹಾಮನು ತನ್ನ ದಾಸಿಯಾದ ಹಾಗರಳನ್ನು ತೆಗೆದುಕೊಳ್ಳಲಿ ಎಂದು ಸಾರಳು ಪ್ರಸ್ತಾಪವನ್ನು ಮುಂದಿಟ್ಟಳು, ಮತ್ತು ಆಕೆಯ ಮೂಲಕವಾಗಿ ಮಗುವೊಂದನ್ನು ಪಡೆಯುವದಕ್ಕೆ ಬಯಸಿದಳು; ಆ ಬಳಿಕ ಆಕೆಯು ಮಗುವನ್ನು ತನ್ನ ಸ್ವಂತದ್ದೆಂದು ಹೇಳಿಕೊಳ್ಳಲು ಶಕ್ತಳಾಗುತ್ತಿದ್ದಳು. ಇದರಿಂದ ದೀರ್ಘಕಾಲದಿಂದ ಅವಳಿಗಿದ್ದ ಗರ್ಭಧರಿಸುವ ಅಶಕ್ತತೆಯನ್ನು - ಅದಕ್ಕೆ ಕಾರಣನು ದೇವರೇ ಎಂದು ಆಕೆಯು ಆರೋಪಿಸಿ

ಆತನು “ಮಕ್ಕಳನ್ನು ಕೊಡಲಿಲ್ಲ” ಎಂದು ಹೇಳಿದಳು (16:2) - ಜಯಿಸುವದಕ್ಕೆ ಆಗುತ್ತಿತ್ತೆಂದು ಆಕೆಯು ನಂಬಿದಂತೆ ಕಾಣಿಸುತ್ತದೆ. ಇದೆಲ್ಲವೂ ವಿವೇಚನಾಬದ್ಧ ಮತ್ತು ಕಾರ್ಯರೂಪವಾದದ್ದು ಎಂಬುದಾಗಿ ಕಂಡಿತ್ತು, ಆದರೆ ಅಂತಹ ಒಂದು ಉಪಾಯದಿಂದ ಮುಂದೆ ಉದ್ಭವವಾಗಲಿದ್ದ ಸಮಸ್ಯೆಗಳನ್ನು ಸಾರಳಾಗಲಿ ಅಥವಾ ಅಬ್ರಹಾಮನಾಗಲಿ ಎದುರುನೋಡಲಿಲ್ಲ.

ಕಾಯುವಂಥದ್ದು ನಾವು ಸಂತೋಷದಿಂದ ಮಾಡುವಂಥ ಸಂಗತಿಯಲ್ಲ, ಆದರೆ ದೇವರು ತನ್ನ ಜನರಿಗೆ ಯಾವಾಗಲೂ ನಂಬಿಕೆಯಿರಬೇಕೆಂದು ಕರೆ ಕೊಟ್ಟಿರುತ್ತಾನೆ. ನಿಜವಾದ ನಂಬಿಕೆಯು ಯೆಹೋವನ ವಾಗ್ದಾನಗಳು ನೆರವೇರುವ ತನಕ ತಾಳ್ಮೆಯಿಂದ ಕಾಯುವಂತೆ ನಮ್ಮನ್ನು ಶಕ್ತರನ್ನಾಗಿಸುತ್ತದೆ.

ಮೋಶೆ, ಕಾಲೇಬ, ಮತ್ತು ಯೆಹೋಶುವರು ವಾಗ್ದಾನ ದೇಶದಲ್ಲಿ ಪ್ರವೇಶಿಸುವಂತೆ ದೇವರು ಇಸ್ರಾಯೇಲ್ಯರಿಗೆ ಅನುಮತಿ ಕೊಡುವ ತನಕ ಅರಣ್ಯದಲ್ಲಿ ನಾಲ್ವತ್ತು ವರ್ಷಗಳ ಕಾಲ ಕಾಯಬೇಕಾಗಿತ್ತು (ಅರಣ್ಯಕಾಂಡ 13:17-14:45). ಹಾಗಿದ್ದಾಗ್ಯೂ, ಮೋಶೆಗೆ ದೇಶವನ್ನು ಕೇವಲ ನೋಡುವದಕ್ಕೆ ಮಾತ್ರವೇ ಅವಕಾಶವು ಕೊಡಲ್ಪಟ್ಟಿತ್ತು; ಆತನು ಅದರೊಳಗೆ ಪ್ರವೇಶಿಸುವದಕ್ಕೆ ಸಾಧ್ಯವಾಗಲಿಲ್ಲ (ಧರ್ಮೋಪದೇಶಕಾಂಡ 32:48-52; 34:1-8).

ದುಷ್ಟ ಬಾಬಿಲೋನಿಯರ ಮೇಲೆ ದೈವಿಕ ದಂಡನೆಯು ಬರುವ ತನಕ ನಂಬಿಕೆಯಿಂದ ಕಾಯಬೇಕೆಂದು ದೇವರು ಹಬಕ್ಕೂಕನಿಗೆ ಕರೆ ಕೊಟ್ಟನು, ಈ ಬಾಬಿಲೋನಿಯರು ಇನ್ನು ಸ್ವಲ್ಪ ಕಾಲದಲ್ಲಿ ಯೆಹೂದ ಮತ್ತು ಯೆರೂಸಲೇಮ್ ಪಟ್ಟಗಳನ್ನು ಧ್ವಂಸಗೊಳಿಸಲಿದ್ದರು (ಹಬಕ್ಕೂಕ 2:2-4). ಬಾಬಿಲೋನಿನವರ ಪತನವು ಭವಿಷ್ಯದಲ್ಲಿ ಅಂದಾಜು ಎಪ್ಪತ್ತು ವರ್ಷಗಳಾದ ನಂತರ ಸಂಭವಿಸಲಿತ್ತಾದ್ದರಿಂದ, ಬಹುಶಃ ಸ್ವತಃ ಪ್ರವಾದಿಯೇ ಅದನ್ನು ಕಾಣುವದಕ್ಕೆ ಜೀವಂತವಾಗಿರುತ್ತಿರಲಿಲ್ಲ (ಹಬಕ್ಕೂಕ 3:16-19; ಯೆರೆಮೀಯ 29:7-14).

ಯೆಶಾಯನು ಬಾಬಿಲೋನಿನಲ್ಲಿದ್ದ ಯೆಹೂದ್ಯರನ್ನು ನಿರೀಕ್ಷೆಯನ್ನು ಬಿಟ್ಟು ಬಿಡಬೇಡಿರೆಂದು, ದೇವರು ಅವರನ್ನು ಆ ದೂರದ ದೇಶದಲ್ಲಿ ಮರೆತು ಬಿಟ್ಟಿದ್ದಾನೆನೋ ಎಂಬಂತೆ ಭಾವಿಸಬೇಡಿರೆಂದು ಸಂತೈಸಿದನು. ಯೆಹೋವನು ಅವರನ್ನು ಅವರ ಸೆರೆವಾಸದಿಂದ ಬಿಡುಗಡೆಗೊಳಿಸುವನೆಂದು “ನಿರೀಕ್ಷಿಸುವ” (ಕಾಯುವ) ನಂಬಿಕೆಯನ್ನು ನವೀಕರಿಸಿಕೊಳ್ಳುವಂತೆ ಅವರಿಗೆ ಕರೆ ಕೊಡುತ್ತಾನೆ (ಯೆಶಾಯ 40:1-31).

ಹೊಸ ಒಡಂಬಡಿಕೆಯಲ್ಲಿ, ಪೌಲನು ಕ್ರೈಸ್ತೀಯ ಜೀವಿತವನ್ನು ನಾವು ನಮ್ಮ ದೇಹಗಳಿಗೆ “ವಿಮೋಚನೆ” ಆಗುವದನ್ನು ತಾಳ್ಮೆಯಿಂದ ಕಾಯುತ್ತಿರುವ ವೇಳೆ ಅನುಭವಿಸುವ ಬಾದೆಯ ನಡುವಿನ ನರಳಾಟದ ಅನುಭವ ಎಂಬುದಾಗಿ ಕರೆಯುತ್ತಾನೆ (ರೋಮಾ 8:18-25). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ “ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತೇವೆ” ಎಂಬುದೆ (ಇಬ್ರಿಯ 6:12).

ದೇವರು ಅಬ್ರಹಾಮ ಮತ್ತು ಸಾರಳರಿಗೆ ಒಬ್ಬ ಮಗನನ್ನು ಅನುಗ್ರಹಿಸುವದಕ್ಕೆ ಏಕೆ ಅಷ್ಟೊಂದು ದೀರ್ಘ ಕಾಲದ ವರೆಗೆ ಕಾದಿದ್ದನು? ಅವರು ಶಾರೀರಿಕವಾಗಿ “ಮೃತಪ್ರಾಯ” (ಇಬ್ರಿಯ 11:12) ಆಗಿರಬೇಕೆಂದು ಬಯಸಿದ್ದನು, ಹೀಗೆ ಆತನೊಬ್ಬನಿಗೆ ಮಾತ್ರವೇ ಮಹಿಮೆಯು ಉಂಟಾಗುತ್ತಿತ್ತು (ರೋಮಾ 4:20) ಅವರು, ಮಾತ್ರವಲ್ಲದೆ ಬರಲಿದ್ದ ಸಕಲ ತಲೆಮಾರುಗಳಿಗೆ “ಯೆಹೋವನಿಗೆ ಅಸಾಧ್ಯವಾದದ್ದು” (18:14) ಯಾವದೂ ಇಲ್ಲ ಎಂಬ ಮನವರಿಕೆಯು ಉಂಟಾಗುವ ಅಗತ್ಯವಿತ್ತು. ನಾವು ಅನುಸರಿಸುವ ಅಗತ್ಯವಿರುವುದು ಯೆಹೋವನ ದಾರಿಯನ್ನೇ - ನಂಬಿಕೆಯ ದಾರಿ - ಆಗಿದೆ, ಅದು ಕೆಲವು ಸಮಯಗಳಲ್ಲಿ ಬಹಳ ದೀರ್ಘ

ಹಾಗೂ ಕಠಿಣವಾದದ್ದೆಂದು ಕಂಡರೂ ಅದನ್ನೇ ಅನುಸರಿಸಬೇಕು.

*ನಂಬಿಕೆಯ ಸ್ಥಾನದಲ್ಲಿ ಮಾನವ ತರ್ಕಕ್ಕೆ ಸ್ಥಾನ ಕೊಡುವುದು.* ತಾನು ಮಕ್ಕಳನ್ನು ಹಡೆಯುವ ವಯಸ್ಸನ್ನು ಮೀರಿ ಹೋಗಿರುತ್ತೇನೆಂಬುದು ಸಾರಳಿಗೆ ಗೊತ್ತಿತ್ತು, ಆದರೆ ಆಕೆಯ ಗಂಡನಿಗೆ ಈಗಲೂ ಮಗನೊಬ್ಬನನ್ನು ಪಡೆಯುವ ಸಾಮರ್ಥ್ಯವಿದೆ ಎಂಬುದಾಗಿ ನಂಬಿದ್ದಳು. ಯೆಹೋವನು ಅಬ್ರಹಾಮನನ್ನು ಒಬ್ಬ ನೇಮಕಗೊಳಿಸಿರುವ ಬಾಧ್ಯಸ್ಥನ ತಂದೆ ಎಂಬುದಾಗಿ ಗುರುತಿಸಿದ್ದಾನೆ ಎಂದು ಅವಳಿಗೆ ಗೊತ್ತಿತ್ತು (15:4), ಆದರೆ ದೇವರು ತಾಯಿಯು ಯಾರೆಂಬುದನ್ನು ಇನ್ನೂ ಬಯಲುಗೊಳಿಸಿರಲಿಲ್ಲ. ಸ್ವಾಭಾವಿಕವಾಗಿಯೇ, ತಾನು ಮಗುವಿಗೆ ಜನ್ಮ ಕೊಡುವವಳೆಂದು ಅನೇಕ ವರ್ಷಗಳ ವರೆಗೂ ನಂಬಿಕೊಂಡಿದ್ದಳು; ಆದರೆ ಈಗ ಆಕೆಯು ಗರ್ಭಧರಿಸುವದಕ್ಕಿದ್ದ ತಾರ್ಕಿಕವಾದ ಹಂತವನ್ನು ಮೀರಿ ಹೋಗಿದ್ದಳಾದ್ದರಿಂದ, ಸಾರಳು ಅಬ್ರಹಾಮನಿಗೆ ಒಬ್ಬ ಬಾಧ್ಯಸ್ಥನನ್ನು ಒದಗಿಸುವದಕ್ಕಿರುವ ಅತ್ಯಂಥ ತಾರ್ಕಿಕವಾದ ದಾರಿಯೆಂದರೆ ತನ್ನ ದಾಸಿಯಾದ ಹಾಗರಳನ್ನು ಗಂಡನಿಗೆ ಕೊಡುವದೇ ಎಂದು ಯೋಚಿಸಿದಳು, ಹೀಗೆ ಆ ಐಕ್ಯತೆಯೊಳಗಿಂದ ಹುಟ್ಟಿದ ಮಗುವು ತನ್ನದೆಂದು ಎಣಿಸಲ್ಪಡಬಹುದು ಎಂದು ಭಾವಿಸಿದಳು.

ನಂಬಿಕೆ ಮತ್ತು ತರ್ಕದ ನಡುವಿನ ಕಾದಾಟವು ಆಧುನಿಕ ಕಾಲದಲ್ಲಿ ಹೊಸದಾಗಿ ಬಂದು ತಲುಪಿರುವ ಸಂಗತಿಯಲ್ಲ; ಅದು ಮಾನವನ ಸ್ವಭಾವದಷ್ಟು ಹಳೆಯದಾಗಿದೆ. ದೇವರು ಹೀಗೆ ಮಾಡಬಹುದೆನೋ ಎಂದು ಸಾರಳು "ಮುಂದಾಗಿ ಯೋಚಿಸಿದ್ದಳು." ಆಕೆಯು ತಾನು ಮಾಡಿದ ಉಪಾಯವು ತಾರ್ಕಿಕವಾಗಿರುವುದು ಮಾತ್ರವೇ ಅಲ್ಲ, ಆದರೆ ದೇವರು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಲಭ್ಯವಿರಬಹುದಾದ ಏಕೈಕ ದಾರಿ ಇದೇ ಆಗಿರುತ್ತದೆಂದು ಊಹಿಸಿಕೊಂಡಿದ್ದಳು. ಒಂದು ಅರ್ಥದಲ್ಲಿ, ಆಕೆಯು ಕಷ್ಟಕರ ಪರಿಸ್ಥಿತಿಯಿಂದ ಹೊರಗೆ ಬರುವಂತೆ ದೇವರಿಗೆ ಸಹಾಯವನ್ನು ಮಾಡುವದಕ್ಕೆ ಪ್ರಯತ್ನಿಸುತ್ತಿದ್ದಳು. ದೇವರಿಗಿಂತ ಜಾಣರಾಗಿ ಯೋಚಿಸುವದು ಮಾನವರಿಗೆ ಯಾವಾಗಲೂ ಅಪಾಯಕರವಾದದ್ದು. ನಿಜವಾದ ನಂಬಿಕೆಯು ದೇವರ ವಾಕ್ಯದ ಮೇಲೆ ಆಧಾರವಾಗಿರುತ್ತದೆ (ರೋಮಾ 10:17), ಆದರೆ ಸಾರಳು ತನಗೆ ಸರಿಯೆಂದು ಕಾಣಿಸಿದ ದಾರಿಯೊಂದನ್ನು (ಜ್ಞಾನೋಕ್ತಿ 14:12) ದೇವರ ಮುಂದೆ ಮಂಡಿಸುವವಳಾಗಿ ಆತನಿಗಿಂತ ಮುಂದಾಗಿ ಓಡುವವಳಾಗಿದ್ದಳು. ಆಕೆಯ ದಾರಿಯು ದುರಂತಕರವಾಗಿ ಅಂತ್ಯಗೊಳ್ಳಬಹುದಿತ್ತು, "ಯೆಹೋವನ ದೂತನು" ಮಧ್ಯಪ್ರವೇಶ ಮಾಡದೆ ಹೋಗಿದ್ದಲ್ಲಿ (16:7), ಹಾಗರಳು ಮತ್ತು ಇನ್ನು ಗರ್ಭದಲ್ಲಿದ್ದ ಆಕೆಯ ಮಗುವು ಅರಣ್ಯದೊಳಗೆ ಸುಡುವ ಬಿಸಿಲಿನಲ್ಲಿ ಮರಣಿಸಿರುವ ಸಂಭವವಿತ್ತು.

ಈ ಘಟನೆಯಲ್ಲಿ, ಸಾರಳ ಗುರಿಯು ದೇವರಿಗೆ ಮಹಿಮೆಯುಂಟು ಮಾಡುವದಾಗಿರಲಿಲ್ಲ, ಆದರೆ ತನಗೆ ಮಕ್ಕಳನ್ನು ಕೊಡದಿರುವದಕ್ಕಾಗಿ ಆತನ ಮೇಲೆ ಆರೋಪವನ್ನು ಮಾಡುವದೇ ಆಗಿತ್ತು ಎಂಬುದು ಸ್ಪಷ್ಟವಾಗಿರುತ್ತದೆ (16:2). ಸೈತಾನನು ಆಕೆಯ ಕಿವಿಗಳಲ್ಲಿ ಹೀಗೆ ಪಿಸುಗುಡುತ್ತಿದ್ದಿರಬಹುದು, "ದೇವರಿಗೆ ಹೃದಯದಲ್ಲಿ ನಿನ್ನ ಬಗ್ಗೆ ಅತ್ಯುತ್ತಮ ಆಸಕ್ತಿಗಳು ಇರುವದಿಲ್ಲ! ಆತನಿಗೆ ನಿನ್ನ ಮೇಲೆ ನಿಜವಾಗಿಯೂ ಪ್ರೀತಿಯಿದ್ದಲ್ಲಿ, ಇಷ್ಟೆಲ್ಲಾ ಕಾಲವಾದ ಬಳಿಕ ಆತನು ಅಬ್ರಹಾಮನ ಮಗುವಿಗೆ ನಿನ್ನನ್ನು ತಾಯಿಯನ್ನಾಗಿ ಮಾಡಿರುತ್ತಿದ್ದನು" (ನೋಡಿರಿ 3:1–6). ದೇವರ ಜನರಾಗಿ, ನಾವು ಇಷ್ಟಪಡುವ ಪ್ರಕಾರ ಮತ್ತು ಯಾವದು ಸಮಯೋಚಿತವಾದದ್ದೆಂದು ನಾವು ಪರಿಗಣಿಸುತ್ತೇವೋ ಆ ಸಂದರ್ಭದಲ್ಲಿ ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸಲಿಲ್ಲವಾದರೆ ಇಂಥ ಬಲೆಗೆ ನಾವು ಬೀಳಬಹುದಾಗಿದೆ.

ಮೆಸ್ಸೀಯತ್ವವನ್ನು ಪಡೆದುಕೊಳ್ಳಲು ಒಂದು ಅಡ್ಡ ದಾರಿಯನ್ನು ಹಿಡಿಯುವಂತೆ

ಸೈತಾನನಿಂದ ಯೇಸುವು ಶೋಧನೆಗೊಳಗಾದನು. ಆತನು ಶ್ರಮೆಯನ್ನನುಭವಿಸುವದಕ್ಕಿಂತಲೂ ತನ್ನ ಶಕ್ತಿಯನ್ನು ತೋರ್ಪಡಿಸುವುದು ಎಷ್ಟೋ ಹೆಚ್ಚು ತಾರ್ಕಿಕವೆಂಬಂತೆ ಕಾಣಿಸಿರಬಹುದು. ನಾಲ್ವತ್ತು ದಿನಗಳ ಕಾಲ ಉಪವಾಸವಿದ್ದ ನಂತರ, ಕೆಲವು ಕಲ್ಲುಗಳನ್ನು ರೊಟ್ಟಿಯಾಗಿ ಮಾರ್ಪಡಿಸಿದ್ದರೆ ಯಾವ ಕೇಡು ಸಂಭವಿಸಿರುವದಕ್ಕೆ ಸಾಧ್ಯವಿತ್ತು? ಅದೇ ರೀತಿಯಲ್ಲಿ, ತನ್ನ ಮಗನು ಮೆಸ್ಸೀಯನೆಂದು ಅಂಗೀಕರಿಸಿಕೊಳ್ಳಲ್ಪಡಬೇಕು ಎಂಬ ದೇವರ ಚಿತ್ತವನ್ನು ದುರ್ಬಳಕೆ ಮಾಡಿಕೊಳ್ಳಲು ಸೈತಾನನು ಪ್ರಯತ್ನಿಸಿದನು. ಯೇಸುವು ದೇವಾಲಯದ ತುದಿಯಿಂದ ಕೆಳಕ್ಕೆ ಜಿಗಿದಿದ್ದರೆ ಮತ್ತು ಜನರ ಗುಂಪುಗಳು ದೇವದೂತರಿಂದ ಆತನು ರಕ್ಷಿಸಲ್ಪಡುವದನ್ನು ಕಂಡಿದ್ದಲ್ಲಿ, ಅವರು ತಕ್ಷಣವೇ ಆತನನ್ನು ಮೆಸ್ಸೀಯನೆಂದು ಘೋಷಿಸಿರಲಾರರೋ? ಬಹುಶಃ ಘೋಷಿಸಿರುತ್ತಿದ್ದರು, ಆದರೆ ಆತನ ಶಿಲುಬೆಯ ಹೊರತಾದ ಮೆಸ್ಸೀಯತ್ವವು ನಮ್ಮ ಪಾಪಗಳ ಪರಿಹಾರಾರ್ಥವಾಗಿ ಆತನ ಮರಣವು ಸಂಭವಿಸದಂತೆ ಲೋಕವನ್ನು ಹಾಗೆಯೇ ಬಿಟ್ಟಿರುವಂತೆ ಮಾಡುತ್ತಿತ್ತು (1 ಯೋಹಾನ 2:2). ಯೇಸುವು ಸೈತಾನನ ದಾರಿಯನ್ನು ತಿರಸ್ಕರಿಸಿದನು, ಅದು ತಾರ್ಕಿಕವೆಂಬಂತೆ ಕಂಡಿದ್ದರೂ ಅದನ್ನು ತಿರಸ್ಕರಿಸಿದನು ಯಾಕೆಂದರೆ ಮಾನವರನ್ನು ಶಾಶ್ವತವಾಗಿ ನಾಶನದಲ್ಲಿರುವವರಾಗಿ ಮತ್ತು ನಿರೀಕ್ಷೆಯಿಲ್ಲದವರಾಗಿ ಇರುವಂತೆ ಬಿಡುವದಕ್ಕೆ ಆತನು ಬಯಸಲಿಲ್ಲ (1 ಕೊರಿಂಥ 15:1-4, 16-19).

*ಕಲಹಕ್ಕೆ ನಡಿಸುವ ದಾರಿ.* ನಂಬಿಕೆಯ ಆತ್ಮೀಕ ಅಡ್ಡದಾರಿ ಹಿಡಿಯುವಿಕೆ ಅನೇಕ ಸಾರಿ ಕುಟುಂಬ ಕಲಹಕ್ಕೆ ದಾರಿ ಮಾಡುತ್ತದೆ. ದೇವರ ಜನರು ಲೋಕದ ಜ್ಞಾನಾನುಸಾರ ನಡೆಯುವಾಗ, ಅದು ಸಹಜವಾಗಿ "ಮತ್ಸರ," "ಸ್ವಾರ್ಥ ಚಿಂತೆ," ಮತ್ತು "ಗಲಿಬಲಿ" ಇರುವವು (ಯಾಕೋಬ 3:13-18). ಅಬ್ರಹಾಮನ ಮನೆಯಲ್ಲಿ ಸಂಭವಿಸಿದ್ದು ನಿಖರವಾಗಿ ಇದೇ ಆಗಿತ್ತು. ಕುಟುಂಬ ವ್ಯಾಜ್ಯಗಳು ನೋವುದಾಯವಾಗಿರಬಲ್ಲವು ಮತ್ತು ಇತ್ಯರ್ಥ ಮಾಡಿಕೊಳ್ಳುವದಕ್ಕೆ ಕಷ್ಟಕರವಾಗಿರಬಲ್ಲವು. ಸಾರಳು ಹಾಗರಳನ್ನು ಅಬ್ರಹಾಮನಿಗೆ ಉಪಪತ್ನಿಯಾಗಿರುವಂತೆ ಕೊಟ್ಟ ವೇಳೆ, ಆ ನಿರ್ಣಯವು ಕುಟುಂಬ ಶಾಂತಿ ಮತ್ತು ಸೌಹಾರ್ದತೆಗಳಿಗೆ ಎಷ್ಟೊಂದು ವಿನಾಶಕಾರಿ ಆಗಬಲ್ಲದೆಂಬುದನ್ನು ಆಕೆಯು ಗ್ರಹಿಸಿಕೊಳ್ಳಲಿಲ್ಲ.

ಪೌಲನು ಗಲಾತ್ಯದಲ್ಲಿರುವ ಕ್ರೈಸ್ತರಿಗೆ ಬರೆಯುವ ವೇಳೆ, ಆತನು ಅವರಿಗೆ ಹೀಗೆ ಕೇಳಿದನು, "ದೇವರಾತ್ಮಾನುಸಾರವಾಗಿ ಪ್ರಾರಂಭಿಸಿ ಈಗ ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದೀರಾ?" (ಗಲಾತ್ಯ 3:3). ದೇವರು ಅಬ್ರಹಾಮ ಮತ್ತು ಸಾರಳಿಗೆ ಇದೇ ಪ್ರಶ್ನೆಯನ್ನು ಕೇಳಿರಬಹುದಾಗಿದೆ. ಅವರು ಅನೇಕ ವರ್ಷಗಳ ಹಿಂದೆ ಆತನೊಂದಿಗೆ ನಂಬಿಕೆಯ ಆತ್ಮೀಕ ನಡೆಯನ್ನು ಆರಂಭಿಸಿದ್ದರು; ಆದರೆ ಈಗ ಅವರು ಅಡ್ಡದಾರಿಯೊಂದನ್ನು ಹಿಡಿಯುತ್ತಲಿದ್ದರು, ಅವರ ಬಂಜೆತನದ ಸಮಸ್ಯೆಗೆ ಪರಿಹಾರವನ್ನು ಒದಗಿಸುವಂತೆ ಶರೀರಭಾವದ ಕಡೆಗೆ ತಿರುಗಿಕೊಳ್ಳುವವರಾಗಿದ್ದರು. ಅವರ ಸಮಸ್ಯೆಯನ್ನು ಪರಿಹರಿಸುವದರ ಬದಲಾಗಿ, ದೇವರ ಯೋಜನೆಯನ್ನು ತಿದ್ದುವದಕ್ಕೆ ಹೋಗಿ ಆ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಗೆಗೊಳಿಸಿತ್ತಷ್ಟೆ. ಸಾರಳ ಉಪಾಯವನ್ನು ಅವರು ಕಾರ್ಯರೂಪಕ್ಕೆ ತಂದ ಕೂಡಲೇ, ಶರೀರಭಾವದ ಕರ್ಮಗಳು - "ಜಗಳ," "ಹೊಟ್ಟೇಕಿಚ್ಚು," "ಸಿಟ್ಟು" (ಗಲಾತ್ಯ 5:19, 20) - ಅಬ್ರಹಾಮನ ಕುಟುಂಬಕ್ಕೆ ವೇದನೆಯನ್ನುಂಟು ಮಾಡುವದಕ್ಕೆ ಆರಂಭಿಸಿದ್ದವು.

ಬೈಬಲಿನ ಕಥನವು ಸೂಚಿಸುವಂತೆ ಕಾಣುವದೇನೆಂದರೆ ಹಾಗರಳು ಶೀಘ್ರವೇ ಅಬ್ರಹಾಮನಿಗೆ ಮಗುವನ್ನು ಹಡೆದಳು (16:3, 4) ಎಂಬುದೆ; ಮತ್ತು ಇದು ಸ್ಪಷ್ಟಗೊಂಡ ತಕ್ಷಣದಲ್ಲಿಯೇ, ಯುವ ಪ್ರಾಯದಲ್ಲಿದ್ದ ದಾಸಿಯು ದುರಹಂಕಾರಗೊಂಡಳು ಮತ್ತು ಸಾರಳನ್ನು

ತಾತ್ಸಾರದಿಂದ ನೋಡಿದಳು (16:4). ಆಕೆಯು ತನ್ನನ್ನು ಸಾರಳಿಗೆ ಸಮಾನ ಸ್ಥಾನದಲ್ಲಿರುವವಳಂತೆ ಭಾವಿಸಿಕೊಂಡಿರಬಹುದು ಅಥವಾ ತನ್ನ ಯಜಮಾನಿಗೆ ಇದ್ದ ಸ್ಥಾನಮಾನಕ್ಕಿಂತಲೂ ತಾನು ಉನ್ನತದಲ್ಲಿರುವವಳೆಂಬಂತೆ ನಡೆದುಕೊಂಡಿರಬಹುದು (ನೋಡಿರಿ ಜ್ಞಾನೋಕ್ತಿ 30:23). ನೋವು ಮತ್ತು ಕೋಪಗೊಂಡವಳಾಗಿ, ಸಾರಳು ತನ್ನ ದುರವಸ್ಥೆಗೆ ಗಂಡನನ್ನು ದೂಷಿಸಿದಳು. ಅಲ್ಲದೆ ತನ್ನ ಅಪರಾಧಕ್ಕಿಂತಲೂ ಅಬ್ರಹಾಮನ ಅಪರಾಧವು ದೊಡ್ಡದೆಂದು ನ್ಯಾಯತೀರಿಸು ಎಂಬುದಾಗಿ ಸಹ ದೇವರನ್ನು ಬೇಡಿಕೊಂಡಳು (16:5). ಹೀಗೆ ನಡೆದ ಕಾರಣದಿಂದಾಗಿ, ಮೂಲಪಿತೃವು ಹಾಗರಳನ್ನು ಪುನಃ ಸಾರಳ ಅಧಿಕಾರಕ್ಕೆ ಒಪ್ಪಿಸಿದನು; ಆದರೆ ಆ ಬಳಿಕ ಸಾರಳು ಅವಳ ಸಂಗಡ ಕೆಟ್ಟದಾಗಿ ನಡೆದುಕೊಂಡಳು, ಆಕೆಯ ಜೀವಿತವನ್ನು ಅತ್ಯಂಥ ದುರವಸ್ಥೆಗೆ ತಂದಿದ್ದರಿಂದ ಈ ಐಗುಪ್ತದ ಸ್ತ್ರೀಯು ಅರಣ್ಯದೊಳಗೆ ಓಡಿ ಹೋದಳು (16:6).

ಕುಟುಂಬದವರ ನೆಮ್ಮದಿಯನ್ನು ಹಾಳು ಮಾಡಿದ್ದ ದುಃಖಕರ ಘಟನೆಗಳಿಗೆ ಅದರಲ್ಲಿ ಭಾಗಿಯಾದವರೆಲ್ಲರ ತಪ್ಪು ಕಾರಣವಾಗಿತ್ತು, ಮತ್ತು ಒಂದು ದಾಂಪತ್ಯ, ಒಂದು ಕುಟುಂಬ, ಮತ್ತು ಒಂದು ಸಭೆಯಲ್ಲಿ ಸಹ ಅನೇಕ ಸಾರಿ ಹೀಗೆಯೇ ಇರುತ್ತದೆ. ಸಾಮಾನ್ಯವಾಗಿ, ಅಲ್ಲಿ ಸಾಕಷ್ಟು ಒಬ್ಬರನ್ನೊಬ್ಬರು ದೂಷಿಸುವಿಕೆಗಳು ನಡೆಯುತ್ತವೆ, ಮತ್ತು ಕೋಪ ಹಾಗೂ ಆರೋಪಗಳು ಸಮಸ್ಯೆಗಳನ್ನು ಬಗೆಹರಿಸುವದಿಲ್ಲ ಅಥವಾ ಒಡಕು ಉಂಟಾಗಿರುವ ಕಡೆಯಲ್ಲಿ ಸಾಮರಸ್ಯವನ್ನು ಮರಳಿ ತಂದು ಕೊಡುವದಿಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ಸಮಾಧಾನವನ್ನು ಪುನಃ ಪಡೆದುಕೊಳ್ಳುವುದಕ್ಕೆ ಪರಸ್ಪರರು ಪಾಪವನ್ನು ಅರಿಕೆ ಮಾಡುವುದು, ಒಬ್ಬರನ್ನೊಬ್ಬರು ಕ್ಷಮಿಸುವದಕ್ಕೆ ಮನಸ್ಸುಳ್ಳವರಾಗಿರುವುದು, ಮತ್ತು ಒಬ್ಬರಿಂದ ಮಾತ್ರವಲ್ಲದೆ ದೇವರಿಂದ ಕ್ಷಮಾಪಣೆಯನ್ನು ಬೇಡಿಕೊಳ್ಳುವದರಲ್ಲಿ ಯಥಾರ್ಥವಾಗಿರುವುದು ಅಗತ್ಯವಾಗಿರುತ್ತದೆ (ನೋಡಿರಿ ಮತ್ತಾಯ 6:12-15; ಎಫೆಸ 4:29-32; ಕೊಲೊಸ್ಸೆ 3:12-15).

ಯಾಕೋಬನು ಯೋಸೇಫನ ಕಡೆಗೆ ಹೊಂದಿದ್ದ ಒಲವು ಈ ಕುಟುಂಬದ ಚಾಲಕಶಕ್ತಿಗೆ ದೃಷ್ಟಾಂತವಾಗಿರುತ್ತದೆ. ಯೋಸೇಫನು ತನ್ನ ತಂದೆಯ ನೆಚ್ಚಿನ ಮಗನಾಗಿದ್ದನೆಂಬುದು ಅತನು ತನ್ನನ್ನು ಅಣ್ಣಂದಿರಿಗಿಂತಲೂ ದೊಡ್ಡವನೆಂದು ಭಾವಿಸಿಕೊಳ್ಳುವಂತೆ ಪ್ರೋತ್ಸಾಹಿಸಿತ್ತು. ಪ್ರತಿಯಾಗಿ, ಅವರು ಆತನನ್ನು ದ್ವೇಷ ಮಾಡುತ್ತಿದ್ದರು ಮತ್ತು ಆತನನ್ನು ಕೊಲ್ಲಬೇಕೆಂದು ಯೋಚನೆ ಮಾಡಿದರು; ಬದಲಾಗಿ, ಅವರು ಆತನನ್ನು ಐಗುಪ್ತದಲ್ಲಿ ದಾಸನನ್ನಾಗಿ ಮಾರಾಟ ಮಾಡಿದರು ಮತ್ತು ಬಳಿಕ ತಮ್ಮ ತಂದೆಗೆ ಸುಳ್ಳು ಹೇಳಿದರು, ಒಂದು ಕಾಡು ಮೃಗವು ಆತನನ್ನು ಸಾಯಿಸಿ ಬಿಟ್ಟಿತೆಂದು ಹೇಳಿದ್ದು (37:1-36). ಅನೇಕ ವರ್ಷಗಳ ಬಳಿಕ, ಐಗುಪ್ತದಲ್ಲಿ ತನ್ನ ಅಣ್ಣಂದಿರ ಮೇಲೆ ಸೇಡು ತೀರಿಸಿಕೊಳ್ಳುವ ಸದವಕಾಶವು ಯೋಸೇಫನಿಗೆ ದೊರಕಿತ್ತು; ಹೇಗೂ, ಅವರು ತನಗೆ ಮಾಡಿದ ಕೃತ್ಯಕ್ಕೋಸ್ಕರ ನಿಜಕ್ಕೂ ವಿಷಾದಿಸುತ್ತಿದ್ದಾರೆಂಬ ಮನವರಿಕೆಯು ಆತನಿಗಾದ ಬಳಿಕ, ಆತನು ಅವರನ್ನು ಕ್ಷಮಿಸಿದನು ಮತ್ತು ತಾವು ಪುನಃ ಒಂದು ಕುಟುಂಬವಾಗಿ ಬಾಳುವಂತಾಗುವ ಹಾಗೆ ತಂದೆಯನ್ನು ಕರೆದುಕೊಂಡು ಬರುವಂತೆ ಅವರನ್ನು ಕಳುಹಿಸಿ ಕೊಟ್ಟನು (45:1-28).

*ನಾಶನಕ್ಕೆ ನಡಿಸುವ ಒಂದು ದಾರಿ.* ಜನರನ್ನು ದಾರಿ ತಪ್ಪಿಸುವಂಥ ಆತ್ಮಿಕವಾದ ಅಡ್ಡದಾರಿಗಳನ್ನು ಹಿಡಿಯುವಿಕೆಯು, ಅವರು ದೇವರ ಕಡೆಗೆ ಪುನಃ ಹಿಂದಿರುಗಿ ಬಾರದೆ ಹೋದರೆ ವಿನಾಶಕಾರಿ ಆಗಬಲ್ಲದು. ಸಮಸ್ಯೆಗಳಿಂದ ದೂರವಾಗಿ ಓಡಿ ಹೋಗುವಿಕೆಯು ನಿಜವಾಗಿ ಏನನ್ನೇ ಆಗಲಿ ಎಂದಿಗೂ ಪರಿಹರಿಸದು, ಆದಾಗ್ಯೂ ಅನೇಕರು ಈ ದಾರಿಯನ್ನು ಪ್ರಯತ್ನಿಸುತ್ತಲೇ ಇರುವರು, ಕಷ್ಟಗಳನ್ನು ಎದುರಿಸುವದಕ್ಕೆ ಬದಲಾಗಿ ಅವುಗಳಿಂದ

ಪಲಾಯನ ಮಾಡಲು ಪ್ರಯತ್ನಿಸುತ್ತಾರೆ. ಅವಳ ಯಜಮಾನಿಯ ಹಾಗೆಯೇ, ಅವರ ವ್ಯಾಜ್ಯದಲ್ಲಿ ಹಾಗರಳದ್ದು ತಪ್ಪಿತ್ತು. ಅವಳು ಎಷ್ಟೊಂದು ದುರಹಂಕಾರಗೊಂಡಿದ್ದಳೆಂದರೆ ಸಾರಳು ಆಕೆಯನ್ನು ನಿಂದಿಸುವಂತಾಗಿತ್ತು ಮತ್ತು ಅವಳ ಜೀವಿತವನ್ನು ಸಹಿಸಿಕೊಳ್ಳಲಾಗದಂತೆ ಮಾಡಿದ್ದಳು. ಆಕೆಯು ಮಾಡುವ ಅಗತ್ಯವಿದ್ದದ್ದೇನೆಂದರೆ ತನ್ನನ್ನು ತಗ್ಗಿಸಿಕೊಂಡು ಅಬ್ರಹಾಮನ ಶಿಬಿರಕ್ಕೆ ಹಿಂದಿರುಗಿ ಹೋಗುವುದು, ಆಕೆಯ ಪಾಪವನ್ನು ಅರಿಕೆ ಮಾಡಿ ತನ್ನ ಯಜಮಾನಿಯಿಂದ ಕ್ಷಮೆಯನ್ನು ಕೇಳಿಕೊಳ್ಳುವುದೇ ಆಗಿತ್ತು. ಯೆಹೋವನ ದೂತನು ಆಕೆಗೆ ಸರಿಯಾಗಿ ಇದನ್ನೇ ಮಾಡಬೇಕೆಂದು ಆದೇಶಿಸಿದ್ದನು. ಹಾಗರಳು ಮನೆಗೆ ಹಿಂದಿರುಗಿ ಹೋಗಿ ನಿಜವಾಗಿಯೂ ಮನೋಭಾವವು ಬದಲಾಗಿದೆ ಎಂಬುದನ್ನು ತೋರ್ಪಡಿಸಿಕೊಂಡಿದ್ದರೆ, ಆಕೆಯ ವಿಷಯದಲ್ಲಿ ಇನ್ನು ಮೇಲೆ ಕಠೋರವಾಗಿ ನಡೆದುಕೊಳ್ಳಲಾಗುತ್ತಿರಲಿಲ್ಲ.

ದೇವರು ತಾಯಿ ಹಾಗೂ ಗರ್ಭದಲ್ಲಿದ್ದ ಮಗುವಿನ ಶಾರೀರಿಕ ಹಿತದ ಬಗ್ಗೆ ಕಾಳಜಿ ಹೊಂದಿದ್ದನೆಂಬುದರಲ್ಲಿ ಸಂಶಯವೇ ಇಲ್ಲ, ಆದರೆ ಆತನು ಅಬ್ರಹಾಮನ ಮನೆಯ ಸದಸ್ಯರಲ್ಲಿ ಬಿರುಕನ್ನುಂಟು ಮಾಡಿದ್ದ ಆತ್ಮೀಕ ಮನಸ್ತಾಪವನ್ನು ಸಹ ಗುಣಪಡಿಸಬೇಕೆಂದು ಬಯಸಿದ್ದನು. ಹಾಗರಳಿಗೆ ದೊರೆತ ದೈವಿಕ ಸಂದೇಶವು ಆಕೆಗೆ ಇನ್ನಷ್ಟು ನಿಂದೆಯ ಬದಲಾಗಿ ಒಂದು ಒಳ್ಳೇ ಸ್ವಾಗತ ದೊರಕುವ ನಿರೀಕ್ಷೆಯನ್ನು ಒದಗಿಸಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆಕೆಯು ಅನೇಕ ಸಂತತಿಯವರಿಗೆ ತಂದೆಯಾಗಲಿರುವಂಥ ಮಗುವಿಗೆ ಜನ್ಮ ನೀಡುವಳೆಂಬ ವಾಗ್ದಾನವು ಸಹ ಅದರೊಳಗೆ ಇತ್ತು (16:10, 11). ದೇವರು ಕೃಪೆಯು ಆತನನ್ನು ನೋಡಿದ ಬಳಿಕವೂ ಜೀವಂತವಾಗಿ ಉಳಿಯುವಂತೆ ಆಕೆಯನ್ನು ಶಕ್ತಗೊಳಸಿದ್ದಕ್ಕೆ ಆಶ್ಚರ್ಯಗೊಂಡವಳಾಗಿ, ಹಾಗರಳು "ಯೆಹೋವನ ಹೆಸರನ್ನು ಹೇಳಿಕೊಂಡಳು" (16:13).

ಬೈಬಲಿನ ಇತಿಹಾಸದುದ್ದಕ್ಕೂ, ದೇವರ ಜನರು ತಮ್ಮನ್ನು ಆತನಿಂದ ದೂರಕ್ಕೆ ನಡಿಸುವ ಮತ್ತು ಅವರ ಜೀವಿತಗಳನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ರಸ್ತೆಗಳ ಕಡೆಗೆ ಆತ್ಮೀಕವಾಗಿ ತಿರುಗಿಕೊಂಡಿರುತ್ತಾರೆ. ಅಂಥ ಸಂದರ್ಭಗಳಲ್ಲಿ, ಆತನು ಒಂದು ಬೇರೆ "ದಾರಿ" (דֶּרֶךְ, *ಡೆರೆಕ)* ಹಿಡಿದುಕೊಂಡು ಆತನ ಕಡೆಗೆ ಪುನಃ ಕರೆದುಕೊಂಡು ಬರುವ ಮಾರ್ಗವನ್ನು ಅನುಸರಿಸಬೇಕೆಂದು ಯಾವಾಗಲೂ ಅವರನ್ನು - ಹಾಗರಳನ್ನು ಕರೆದ ಪ್ರಕಾರವೇ - ಕರೆದಿರುತ್ತಾನೆ (16:7-9).

ದೇವರು ಇಸ್ರಾಯೇಲ್ಯರನ್ನು ಐಗುಪ್ತ ದೇಶದೊಳಗಿಂದ ಹೊರಗೆ ಕರೆದುಕೊಂಡು ಬಂದ ವೇಳೆ, ಆತನು ಅವರನ್ನು ರಾತ್ರಿಯಲ್ಲಿ ಅಗ್ನಿ ಸ್ತಂಭವಾಗಿ ಮತ್ತು ಹಗಲಿನಲ್ಲಿ ಮೇಘದ ರೂಪದಲ್ಲಿ ನಡೆಸಿದನು, ಅವರನ್ನು ಕೆಂಪು ಸಮುದ್ರಕ್ಕೆ ಮತ್ತು ಬಳಿಕ ಅದರ ಮೂಲಕವಾಗಿ ಸಾಗುವ "ದಾರಿಯಲ್ಲಿಯೇ *[ಡೆರೆಕ]"* ನಡಿಸಿಕೊಂಡು ಬಂದನು (ವಿಮೋಚನಕಾಂಡ 13:17, 18; ನೋಡಿರಿ 14:19, 20).

ಅದಾದ ನಂತರ, ಇಸ್ರಾಯೇಲ್ಯರು ಸೀನಾಯಿ ಪರ್ವತದ ಮೇಲೆ ನಡಿಸಲ್ಪಟ್ಟರು, ಅಲ್ಲಿ ಅವರಿಗೆ ಯೆಹೋವನ ಆತ್ಮೀಕ "ಮಾರ್ಗ" ದಲ್ಲಿ ನಡೆಯುವದನ್ನು ಕಲಿಸುವ ದಶಾಜ್ಞೆಗಳು ಕೊಡಲ್ಪಟ್ಟವು (*ಡೆರೆಕ*; ಧರ್ಮೋಪದೇಶಕಾಂಡ 5:33). ಆತನ ಮಾರ್ಗವು ಅವರನ್ನು ಮರಣಕ್ಕೆ ನಡಿಸುವದರ ಬದಲಾಗಿ ಜೀವಕ್ಕೆ ನಡಿಸುವದಾಗಿತ್ತು (ಧರ್ಮೋಪದೇಶಕಾಂಡ 30:19, 20). ಹೇಗೂ, ಯೆಹೋವನ "ಮಾರ್ಗವನ್ನು ಅವರು ಬೇಗನೆ ಬಿಟ್ಟುಹೋಗಿ [*ಡೆರೆಕ*]" ವಿಗ್ರಹಾರಾಧನೆಯ ಕಡೆಗೆ ತಿರುಗಿಕೊಂಡರು (ವಿಮೋಚನಕಾಂಡ 32:8). ಈ ಆತ್ಮೀಕ ಮಾರ್ಗ ಬದಲಿಸುವಿಕೆಯು ಅವರ ಮೇಲೆ ಘೋರವಾದ ಪರಿಣಾಮಗಳನ್ನು ಬೀರಿತ್ತು: ದೇವರ ಸಂಗಡ

ಅನ್ಯೋನ್ಯತೆಯನ್ನು ಕಳೆದುಕೊಂಡಿದ್ದರು, ಅವರ ದೇವಾಲಯವು ಮತ್ತು ದೇಶವು ನಾಶಗೊಂಡವು, ವಾಗ್ದಾನ ದೇಶದಿಂದ ದೂರವಾಗಿ ಸೆರೆವಾಸಕ್ಕೆ ಒಳಗಾದರು. ಮೋಶೆಯು ಇಂಥ ವಿನಾಶಗಳು ಸಂಭವಿಸುವವೆಂದು ಅವರಿಗೆ ಎಚ್ಚರಿಕೆ ನೀಡಿದ್ದನು (ಧರ್ಮೋಪದೇಶಕಾಂಡ 29:24-30:1); ಆದಾಗ್ಯೂ ಅವರು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ತಿರುಗಿ ಬರುವದಾದರೆ ಅವರ ಮೇಲೆ ಕನಿಕರ ತೋರುವನು ಮತ್ತು ಅವರು ಸೆರೆವಾಸದಿಂದ ಬಿಡುಗಡೆಗೊಂಡು ಹಿಂದಿರುಗುವ ಸಾಧ್ಯತೆಯು ಸಹ ಇರುವದೆಂದು ಅವರಿಗೆ ತಿಳಿಸಿದನು (ಧರ್ಮೋಪದೇಶಕಾಂಡ 30:2, 3).

ಅನಂತರದಲ್ಲಿ, ತಮ್ಮ ಅಡ್ಡದಾರಿಯಿಂದ ಹಿಂದಿರುಗಿ ದೇವರ ಕಡೆಗೆ ಮತ್ತು ಒಂದು ಕಾಲದಲ್ಲಿ ಇಸ್ರಾಯೇಲ್ ಆಗಿದ್ದಂಥ ದೇಶಕ್ಕೆ ಪುನಃ ಬರುವಂತೆ ಜನರನ್ನು ಪ್ರವಾದಿಗಳು ಬೇಡಿಕೊಂಡರು. ಯೆಶಾಯವು ಈ ಕೆಳಗಿನ ಮಾತುಗಳಲ್ಲಿ ಕರೆಯನ್ನು ನೀಡಿದನು:

> ಅಲ್ಲಿ ರಾಜಮಾರ್ಗ*[ಡೆರೆಕ]* ವಿರುವದು, ಹೌದು [ಹೋಗಿಬರುವ] ದಾರಿ *[ಡೆರೆಕ]*; ಅದು ಪರಿಶುದ್ಧಮಾರ್ಗ *[ಡೆರೆಕ]* ಎನಿಸಿಕೊಳ್ಳುವದು; ಯಾವ ಅಶುದ್ಧನೂ ಅಲ್ಲಿ ನಡೆಯನು, ಅದು ದೇವಜನರಿಗಾಗಿಯೇ ಇರುವದು, ಅಲ್ಲಿ ಹೋಗುವ ಮೂಢನೂ ದಾರಿತಪ್ಪನು. ಸಿಂಹವು ಅಲ್ಲಿರದು, ಕ್ರೂರ ಜಂತು ಅಲ್ಲಿ ಸೇರದು, ಕಾಣುವದೇ ಇಲ್ಲ; ಬಿಡುಗಡೆಯಾದವರೇ ಅಲ್ಲಿ ನಡೆಯುವರು; ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿಹೋಗುವವು (ಯೆಶಾಯ 35:8-10; ನೋಡಿರಿ 40:3-5; 43:19; 55:7-9).

*ಮುಕ್ತಾಯ: ಪುನಃ ದೇವರ ಬಳಿಗೆ ಕರೆ ತರುವ ದಾರಿ.* ಹೊಸ ಒಡಂಬಡಿಕೆಯಲ್ಲಿ, “ಯೇಸು ಕ್ರಿಸ್ತನ ವಿಷಯವಾದ ಸುವಾರ್ತೆ” (ಮಾರ್ಕ 1:1) ಸ್ನಾನಿಕನಾದ ಯೋಹಾನನ ಬೋಧನೆಯೊಂದಿಗೆ ಆರಂಭಗೊಳ್ಳುತ್ತದೆ, ದೇವರು ಆತನನ್ನು ಆತ್ಮೀಕವಾಗಿ ಬೇರೆ ದಾರಿ ಹಿಡಿದಿದ್ದ ಜನರನ್ನು ಪಶ್ಚಾತ್ತಾಪಕ್ಕೆ ಕರೆಯುವಂತೆ ಆದೇಶಿಸಿದ್ದನು. ಯೋಹಾನನಿಗೆ ವಹಿಸಿದ್ದ ಕೆಲಸವು “ಕರ್ತನ ದಾರಿಯನ್ನು [ὁδός, *ಹೊಡೊಸ]* ಸಿದ್ಧಮಾಡು [ವುದು]; ಆತನ ಹಾದಿಗಳನ್ನು ನೆಟ್ಟಗೆಮಾ [ಡುವುದು]” ಆಗಿತ್ತು (ಮಾರ್ಕ 1:3). ಆತನು ಈ ಕೆಲಸವನ್ನು “ನೀವು ಪಾಪಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿಹೇಳುತ್ತಾ” (ಮಾರ್ಕ 1:4) ಮತ್ತು ಜನರಿಗೆ “ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು” ಎಂದು ಯೇಸುವನ್ನು ತೋರಿಸುವ ಮೂಲಕ ಮಾಡಿದನು (ಯೋಹಾನ 1:29).

ಅನಂತರದಲ್ಲಿ, ಶಿಲುಬೆಯ ನೆರಳಿನಲ್ಲಿದ್ದವನಾಗಿ, ಯೇಸುವು ತಾನು ಹೊರಟು ಹೋಗುವದರ ಕುರಿತಾಗಿ ಶಿಷ್ಯರೊಂದಿಗೆ ಮಾತಾಡಿದನು. ಅವರು ಗೊಂದಲಕ್ಕೊಳಗಾದರು, ಆತನು ಏಕೆ ಅವರನ್ನು ತೊರೆದು ಹೋಗುತ್ತಿದ್ದಾನೆ ಮತ್ತು ಅವರು ಏಕೆ ಆತನನ್ನು ಹಿಂಬಾಲಿಸಲು ಸಾಧ್ಯವಿಲ್ಲ ಎಂಬುದು ಅವರಿಗೆ ತಿಳಿಯಲಿಲ್ಲ (ಯೋಹಾನ 13:36, 37). ಯೋಹಾನ 14ರಲ್ಲಿ, ಕರ್ತನು ಅವರಿಗೆ ತಾನು ಅವರಿಗೋಸ್ಕರ “ಸ್ಥಳವನ್ನು ಸಿದ್ಧಮಾಡುವದಕ್ಕೆ” ತನ್ನ “ತಂದೆಯ ಮನೆಗೆ” (ಪರಲೋಕಕ್ಕೆ) ಹೋಗುತ್ತಿದ್ದೇನೆಂದು, ಮತ್ತು ಅನಂತರದಲ್ಲಿ ಅವರನ್ನು ಅಲ್ಲಿರುವದಕ್ಕೋಸ್ಕರ ಕರೆದುಕೊಂಡು ಹೋಗಲು ಬರುವೆನೆಂದು ಹೇಳಿದನು (ಯೋಹಾನ 14:2, 3). ತರುವಾಯ ಯೇಸುವು ಹೀಗೆ ಹೇಳುವ ಮೂಲಕ ಅವರಲ್ಲಿ ಆಶ್ಚರ್ಯವುಂಟು ಮಾಡಿದನು, “ನಾನು ಹೋಗುವ ಸ್ಥಳದ ಮಾರ್ಗವು [*ಹೊಡೊ*] ನಿಮಗೆ

ತಿಳಿದದೆ" (ಯೋಹಾನ 14:4). ಅದಕ್ಕೆ ತೋಮನು ಹೀಗೆ ಪ್ರತ್ಯುತ್ತರ ನೀಡಿದನು, "ಸ್ವಾಮೀ, ನೀನು ಎಲ್ಲಿಗೆ ಹೋಗುತ್ತೀಯೋ ನಮಗೆ ತಿಳಿಯದು; ಮಾರ್ಗವು [*ಹೊಡೊ*] ಹೇಗೆ ತಿಳಿದೀತು." ಆತನಿಗೆ ಯೇಸುವು "ನಾನೇ ಮಾರ್ಗವೂ [*ಹೊಡೊಸ*] ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" ಎಂದು ಉತ್ತರಿಸಿದನು (ಯೋಹಾನ 14:5, 6). ಅನೇಕರು ಬೇರೆ ದಾರಿಯೊಂದರಲ್ಲಿ ಸಾಗುವ ಪ್ರಲೋಭನೆಗೆ ಒಳಗಾಗುತ್ತಾರಾದರೂ, ದೇವರ ಬಳಿಗೆ, ಪರಲೋಕಕ್ಕೆ, ಮತ್ತು ನಿತ್ಯಜೀವಕ್ಕೆ ಸಾಗುವ ಏಕೈಕ ಸತ್ಯ ಮಾರ್ಗ, ರಸ್ತೆ, ಅಥವಾ ದಾರಿಯು ಯೇಸುವೇ ಆಗಿರುತ್ತಾನೆ. ಆದಿ ಕ್ರೈಸ್ತರು "ಮಾರ್ಗದ [*ಹೊಡೊಸ*]" ಜನರು ಎಂದು ಗುರುತಿಸಲ್ಪಟ್ಟಿದ್ದರು (ಅಪೊಸ್ತಲರ ಕೃತ್ಯಗಳು 9:2; 22:4; 24:14). ಕ್ರಿಸ್ತನು ತಂದೆಯ ಮನೆಗೆ ಸೇರಿಸುವಂಥ ಸತ್ಯವಾದ ಮತ್ತು ಏಕೈಕ ದಾರಿ ಆಗಿರುತ್ತಾನೆ (ನೋಡಿರಿ ಲೂಕ 15:11-32).

---

## ಅಡಿಟಿಪ್ಪಣಿಗಳು

[1]ಆದಿಕಾಂಡ 16:3ರಲ್ಲಿ ಕೊಡಲ್ಪಟ್ಟಿರುವ ಮಾಹಿತಿಯ ಅನುಗುಣವಾಗಿ, ಈ ಹಂತದಲ್ಲಿ ಅಬ್ರಹಾಮನು ಎಂಭತ್ತೈದು ವರ್ಷದವನು ಮತ್ತು ಸಾರಳು ಎಪ್ಪತ್ತೈದು ವರ್ಷದವಳಾಗಿದ್ದಳು. (ಅಬ್ರಹಾಮನು ಹಾರಾನ್ ತೊರೆದು ಹೊರಟ ವೇಳೆ ಆತನಿಗಿದ್ದ ವಯಸ್ಸನ್ನು ತಿಳಿಯಲು 12:4ನ್ನು ಮತ್ತು ಎರಡರ ನಡುವೆ ಇರುವ ವಯಸ್ಸಿನ ವ್ಯತ್ಯಾಸವನ್ನು ತಿಳಿಯಲು 17:17ನ್ನು ನೋಡಿರಿ.) [2]Hermann J. Austel, "שִׁפְחָה," in *TWOT*, 2:947. [3]Theophile J. Meek, trans., "Real Adoption," in *Ancient Near Eastern Texts Relating to the Old Testament*, 3d ed., ed. James B. Pritchard (Princeton, N.J.: Princeton University Press, 1969), 220. ಈ ಆಚಾರದ ಕುರಿತಾದ ಇತರ ಉದಾಹರಣೆಗಳಿಗಾಗಿ, ನೋಡಿರಿ Victor P. Hamilton, *The Book of Genesis: Chapters 1–17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 444. [4]ಆದಿಕಾಂಡ 3:17 ಹೇಳುವದೇನೆಂದರೆ ಆದಾಮನು ಹವ್ವಳ "ಮಾತು ಕೇಳಿ" ದ್ದನು ಎಂಬದೆ. [5]Hamilton, 446. [6]ಅವರ ಪಾಪವನ್ನು ಅರಿಕೆ ಮಾಡುವದರ ಬದಲಾಗಿ, ಆದಾಮ ಮತ್ತು ಹವ್ವ ಇಬ್ಬರೂ ಆದಿಕಾಂಡ 3:12, 13ರಲ್ಲಿ ಒಂದು ರೀತಿಯಲ್ಲಿ ತಪ್ಪನ್ನು ಒಬ್ಬರ ಮೇಲೊಬ್ಬರು ಹೊರಿಸುವ ಅಪರಾಧ ಮಾಡಿದ್ದರು. [7]*The Code of Hammurabi* 146. [8]Leonard J. Coppes, "עָנָה," in *TWOT*, 2:682. [9]ನೋಡಿರಿ 16:7, 9-11, 13; 22:11, 12, 15; 31:11, 13; 32:24, 28, 30; ವಿಮೋಚನಕಾಂಡ 3:2, 4; ನ್ಯಾಯಸ್ಥಾಪಕ 6:12, 14, 22; 13:6, 9, 22. [10]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 825.

[11]ಇದು ಅನುವಾದದಲ್ಲಿರುವ ಒಂದು ಅಸಾಮಂಜಸ್ಯತೆಯಾಗಿರುತ್ತದೆ. 16:12ರಲ್ಲಿ ಇಸ್ಮಾಯೇಲ್ ಮತ್ತು ಆತನ ಬಂಧುಗಳ ಕುರಿತಾದ ಪ್ರವಾದನೆ ಮತ್ತು 25:18ರಲ್ಲಿ ಅದರ ನೆರವೇರುವಿಕೆ ಇವೆರಡನ್ನೂ ಒಂದೇ ವಿಧದಲ್ಲಿ ಅನುವಾದಿಸತಕ್ಕದ್ದು. [12]The RSV and NRSV have a similar translation. [13]Kenneth A. Mathews, *Genesis 11:27–50:26*, The New American Commentary, vol. 1B (Nashville: Broadman & Holman Publishers, 2005), 192. [14]ದಾಸಿಯೊಬ್ಬಳಿಗೆ ಹುಟ್ಟಿದ ಮಕ್ಕಳು ತಂದೆಯ ಸ್ವತ್ತಿನಿಂದ ಏನಾದರೂ ಬಾಧ್ಯವಾಗಿ ಹೊಂದಬೇಕೆಂದರೆ ಅವರು ತಂದೆಯಿಂದ ಅಂಗೀಕರಿಸಿಕೊಳ್ಳಬೇಕಾದ ಅಗತ್ಯವಿತ್ತು. (*The Code of Hammurabi* 171.)